

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 06 Issue : 285 Tuesday 02-04-2024 E-mail : maruti.b.hosamani76@gmail.com Page: 4 Price : Rs. 1/-


## ಕಸಾಪ ದತ್ತಿ ನಿಧಿ ಕಾರ್ಯಕ್ರಮದಲ್ಲಿ ವಚನ ಗಾಯನ ಮಾಡಿದ: ಅನುಶ್ರೀ, ಶ್ರೀನಿಧಿ ಬಂಡೆ





**ವಿಜಯಪುರ :** ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ತಾಲೂಕ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ನಗರ ಘಟಕ ಕನ್ನಡ ಸಾಹಿತ್ಯ ಪರಿಷತ್ತು ವಿಜಯಪುರ ವತಿಯಿಂದ ನಗರದ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ರವಿವಾರದಂದು ಜರುಗಿದ ದತ್ತಿನಿಧಿ ಕಾರ್ಯಕ್ರಮದಲ್ಲಿ ನಾಗಠಾಣ ಗ್ರಾಮದ ಅವಳಿ ಹೆಣ್ಣು ಮಕ್ಕಳಾದ ಅನುಶ್ರೀ-ಶ್ರೀನಿಧಿ ಬಂಡೆ ಅವರು ಶರಣ ಶ್ರೇಷ್ಠ ಬಸವಣ್ಣನವರ ವೇಷಧಾರಿಗಳಾಗಿ ವಚನಗಳನ್ನು ಪ್ರಸ್ತುತ ಪಡಿಸಿದರು.

ಈ ಸಂದರ್ಭದಲ್ಲಿ ಸಾನಿಧ್ಯ ವಹಿಸಿದ್ದ, ಮನುಗೂಳಿ ವಿರಕ್ತ ಮಠದ ಶ್ರೀ ಮ ನಿ ಪ್ರ ವಿರತೀಶಾನಂದ ಸ್ವಾಮೀಜಿ, ಅನುಶ್ರೀ-ಶ್ರೀನಿಧಿ ಅವರ ವಚನ ಗಾಯನದ ಪ್ರತಿಭೆಯನ್ನು ಮೆಚ್ಚಿ ಸನ್ಮಾನಿಸಿ, ಮಕ್ಕಳಿಗೆ ಬಾಲ್ಯದಿಂದಲೇ ವಚನಗಳನ್ನು ಹೇಳುವ ರೂಢಿ ಮಾಡಿಸಿದಾಗ, ಅವರು ಸಂಸ್ಕಾರಯುತವಾಗಿ ಬೆಳೆದು ಸತ್ಪ್ರಜೆಗಳಾಗಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ವಿಜಯಪುರ ಜಿಲ್ಲಾ ಕೇಂದ್ರ ಕಾರಾಗೃಹದ ಅಧೀಕ್ಷಕರಾದ ಡಾ.ಆಯ್ ಜಿ ಮ್ಯಾಗೇರಿ, ವಿಶ್ರಾಂತ ಮುಖ್ಯ ಅಧ್ಯಾಪಕಿ ಶಾರದಾ ಐಹೊಳ್ಳಿ, ಕಸಾಪ ಜಿಲ್ಲಾಧ್ಯಕ್ಷ ಹಾಸಿಂಪೀರ ವಾಲೀಕಾರ, ಹಿರಿಯ ಸಾಹಿತಿ ಡಾ.ವ್ಹಿ ಡಿ ಐಹೊಳ್ಳಿ, ಸಾಹಿತಿಗಳಾದ ಜಯಶ್ರೀ ಹಿರೇಮಠ, ಸುಜಾತಾ ಹ್ಯಾಳದ, ಗಣ್ಯ ವಾಪಾರಸ್ಥರಾದ ಎಸ್ ಎಂ ಹಣಮಶೆಟ್ಟಿ, ಎಸ್ ಕೆ ಇಂಗಳೇಶ್ವರ, ವಿಜಯಪುರ ಜಿಲ್ಲಾ ಕೈಗಾರಿಕಾ ತರಬೇತಿ ಸಂಸ್ಥೆಯ ಅಧೀಕ್ಷಕಿ ಶಶಿಕಲಾ ನಾಯ್ಕೋಡಿ, ಶಿಕ್ಷಕ ಪ್ರಭು ಅಳ್ಳಗಿ, ದತ್ತಿ ಸಂಚಾಲಕ ರಾಜೇಸಾಬ ಶಿವನಗುತ್ತಿ, ಕಸಾಪ ಗೌರವ ಕಾರ್ಯದರ್ಶಿಗಳಾದ ಡಾ.ಮಾಧವ ಗುಡಿ, ಸುಭಾಷ ಕನ್ನೂರ, ಶಿಕ್ಷಕರಾದ ಸಂತೋಷಕುಮಾರ ಬಂಡೆ, ಎ ಎ ವಾಲೀಕಾರ, ಶಿಲ್ಪಾ ಭಸ್ಮೆ, ಶೋಭಾ ಬಡಿಗೇರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

**ಜಿಲ್ಲಾ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಶಿವಪ್ಪ.ಬಿ.ಹರಿಜನ. ಇಂಡಿ**

## ಕಿಡಿಗೇಡಿಗಳಿಂದ ಗ್ರಾಮ ಒನ್ ಸೇವಾ ಕೇಂದ್ರಕ್ಕೆ ಬೆಂಕಿ ತಗುಲಿಸಿದ ಶಂಕೆ



**ಕಲಕೇರಿ :** ವಿಜಯಪುರ ಜಿಲ್ಲೆಯ ತಾಳಿಕೋಟಿ ತಾಲೂಕಿನ ಕಲಕೇರಿ ಗ್ರಾಮದಲ್ಲಿ ಗ್ರಾಮ ಒನ್ ಸೇವಾ ಕೇಂದ್ರ ಪಕ್ಕದಲ್ಲಿ ಬೆಳಗಿನ ಜಾವ.7.30. ಗಂಟೆಗೆ ಯಾರೋ ಕಿಡಿಗೇಡಿಗಳು ಬೆಂಕಿಯನ್ನು ಹಚ್ಚಿ ಹೋಗಿದ್ದಾರೆ.

ಅದರಿಂದ ಸರ್ವಿಸ್ ವಾಯರು ಸುಟ್ಟಿದೆ ಮತ್ತು ಗ್ರಾಮ ಒನ್ ಸೇವಾ ಕೇಂದ್ರ ಒಳಗಡೆ ಎರಡು ಕಂಪ್ಯೂಟರ್ ಗಳನ್ನು ಬೆಂಕಿಯ ಜಳ ಬಡಿದು ಸುಟ್ಟಿದೆ ಗ್ರಾಮ ಒನ್ ಸೇವಾ ಕೇಂದ್ರದ ಮಾಲೀಕರಾದ ರಮೇಶ ಮೋಪಗಾರ ಇವರು ಬೆಳಗ್ಗೆ 6 ಗಂಟೆಗೆ ನಾವು ಮನೆಗೆ ಹೋದ ಮೇಲೆ ಏಳೂವರೆ ಗಂಟೆಯ ನಂತರ ನಮಗೆ ಗೊತ್ತಾಯ್ತು ಯಾರೋ ಕಿಡಿಗೇಡಿಗಳು ಬೆಂಕಿ ಹಚ್ಚಿದ್ದಾರೆ ಬನ್ನಿ ಅಂತಾ ನಮ್ಮ ಫ್ರೆಂಡ್ ಫೋನ್ ಹಚ್ಚಿದ ವೇಳೆಯಲ್ಲಿ ನಾನು ಓಡಿ ಬಂದು ನೀರಿನ ಟ್ಯಾಂಕರ್ ತರಿಸಿ ನೀರನ್ನು ಹೊಡೆದು ಬೆಂಕಿಯನ್ನು ಸಂಪೂರ್ಣ ಹಾರಿಸಿದ್ದಾರೆ ಎರಡು ಕಂಪ್ಯೂಟರ್ ಬೆಲೆ 50 ರಿಂದ 70 ಸಾವಿರ ರೂಪಾಯಿಗಳು ನಷ್ಟ ಆಗಿದೆ ಎಂದು ಅಂಗಡಿ ಮಾಲೀಕರು ತಿಳಿಸಿದರು. ಗ್ರಾಮ ಒನ್ ಸೇವಾ ಕೇಂದ್ರ ಸಂಬಂಧಪಟ್ಟ ಅಧಿಕಾರಿಗಳು ಇವರಿಗೆ ಸರಕಾರ ದಿಂದ ಪರಿಹಾರ ಕೊಡಿಸಬೇಕು ಎರಡು ಕಂಪ್ಯೂಟರ್ ಗಳನ್ನು ಸುಟ್ಟು ಕರಕಲಾಗಿದೆ ಆದ್ದರಿಂದ ಸರ್ಕಾರದಿಂದ ಏನಾದರೂ ನನಗೆ ಪರಿಹಾರ ಕೊಡಿಸಿ ಎಂದು ತಿಳಿಸಿದರು.

ಅಂಗಡಿ ಮಾಲೀಕರಾದ ರಮೇಶ ಮೋಪಗಾರ. ಊರಿನ ಮುಖಂಡರಾದ ಹಣಮಂತ ವಡ್ಡರ. ರಾಕೇಶ್ ಕಡಿಮನಿ. ರಂಗಪ್ಪ ವಡ್ಡರ. ಮಹಾಂತೇಶ ಮೋಪಗಾರ. ಇನ್ನೂ ಹಲವಾರು ಜನರು ಸೇರಿ-ಕೊಂಡು ಬೆಂಕಿಯನ್ನು ನೀರಿನಿಂದ ಹಾರಿಸಿದರು.

**ತಾಲೂಕನ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಮೈಬೂಬಬಾಷ.ಮನಗೂಳಿ. ತಾಳಿಕೋಟೆ**

## ಬಂಜಾರ ಸಮಾಜಕ್ಕೆ ಕಿವಿಮಾತು ಹೇಳಿದ ಸಂತೋಷ ಪಾಟೀಲ



**ಸಿಂದಗಿ :** ಭಾರತ ಇತಿಹಾಸದಲ್ಲಿ ಪ್ರಧಾನ ಮಂತ್ರಿಯಾದ ನರೇಂದ್ರ ಮೋದಿಜಿ ಸಾಧನೆ ಅಮೋಘವಾದುದ್ದು ಹಿಂದುಳಿದವರ್ಗದ ಜನರಿಗಾಗಿ ವಿಶೇಷವಾಗಿ ಬಂಜಾರ ಸಮುದಾಯದವರಿಗೆ ಅಭಿವೃದ್ಧಿಗಾಗಿ ಭಾರತೀಯ ಜನತಾ ಪಕ್ಷವು ಬಂಜಾರ ಅಭಿವೃದ್ಧಿ ನಿಗಮ ಸ್ಥಾಪಿಸುವುದರ ಮೂಲಕ ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮವಾಗಿ ಪರಿವರ್ತಿಸಿ ಅವುಗಳನ್ನು ಅಭಿವೃದ್ಧಿ ಪಣ ತೊಟ್ಟಿದೆ ಹಾಗೂ ಲಂಬಾಣಿ ಜನಾಂಗದವರಿಗೆ ಕೇಂದ್ರ ಮತ್ತು ರಾಜ್ಯದಲ್ಲಿ ಮಂತ್ರಿಸ್ಥಾನ ನೀಡಿದೆ ಈಗಿನ ಲೋಕಸಭಾ ಚುನಾವಣೆ ಕಲಬುರಗಿಯಲ್ಲಿ ಡಾ,ಉಮೇಶ್ ಜಾಧವ ಅವರಿಗೆ ನಮ್ಮ ಕೇಂದ್ರ ಸರ್ಕಾರ ಟಿಕೆಟ್ ನೀಡಿದೆ, ಕರ್ನಾಟಕ ಕಾಂಗ್ರೆಸ್ ಸರ್ಕಾರವು ಲಂಬಾಣಿ ಜನಾಂಗದವರಿಗೆ ಯಾವುದೇ ಮಂತ್ರಿಸ್ಥಾನವನ್ನು ನೀಡಿಲ್ಲ ಹಾಗೂ ಲೋಕಸಭಾ ಚುನಾವಣೆಯಲ್ಲಿ ನಿಮ್ಮ ಸಮಾಜಕ್ಕೆ ಟಿಕೆಟ್ ನ್ನು ನೀಡಿಲ್ಲ ವಿಜಯಪುರ ಲೋಕಸಭಾ ಚುನಾವಣೆಯಲ್ಲಿ ಲಂಬಾಣಿ ಸಮಾಜದವರು ಯಾವುದೇ ಊಹಾಪೋಹಗಳಿಗೆ ಕಿವಿ ಗೊಡದೆ ಮತ್ತೆ ನರೇಂದ್ರ ಮೋದಿ ಅವರನ್ನು ಪ್ರಧಾನ ಮಂತ್ರಿ ಮಾಡಲು ಹಾಗೂ ಭಾರತೀಯ ಜನತಾ ಪಕ್ಷದ ಅಭ್ಯರ್ಥಿಯಾಗಿ ರಮೇಶ್ ಜಿಗಜಿಣಗಿ ಯವರಿಗೆ ತಮ್ಮ ಸಂಪೂರ್ಣ ಬೆಂಬಲ ನೀಡಬೇಕು, ವಿಜಯಪುರ ಲೋಕಸಭಾ ಚುನಾವಣೆಯಲ್ಲಿ ಜಿಲ್ಲಾ ಕಾಂಗ್ರೆಸ್ ನಾಯಕರು ನಿಮ್ಮ ಸಮಾಜಕ್ಕೆ ತಪ್ಪು ಸಂದೇಶವನ್ನು ನೀಡುತ್ತಿದ್ದಾರೆ, ನಿವು ಅದಕ್ಕೆ ಕಿವಿ ಕೊಡದೆ ನಿಮ್ಮ ಸಮಾಜದ ಅಭಿವೃದ್ಧಿಗಾಗಿ ಸತತವಾಗಿ ನಾವು ಶ್ರಮಿಸುತ್ತಿದ್ದೇವೆ, ಎಂದು ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಸಿಂದಗಿ ತಾಲ್ಲೂಕ ಭಾರತೀಯ ಜನತಾ ಪಕ್ಷದ ಮಂಡಳ ಅಧ್ಯಕ್ಷರಾದ ಸಂತೋಷಗೌಡ ಪಾಟೀಲ, ಡಂಬಳ ಅವರು ತಿಳಿಸಿದರು,

**ವರದಿಗಾರರು : ಭೀಮಪ್ಪ.ಹಚ್ಯಾಳ.ದೇವರ ಹಿಪ್ಪರಗಿ**

## ಕೊಪ್ಪಳ ಲೋಕಸಭಾ ಕ್ಷೇತ್ರದಿಂದ ಕೆಆರ್ಎಸ್ ಪಕ್ಷ ಸ್ಪರ್ಧೆ: ನಿರುಪಾದಿ ಗೋಮರ್ಸಿ



**ಕೊಪ್ಪಳ :** 2024ರ ಕೊಪ್ಪಳ ಲೋಕಸಭಾ ಚುನಾವಣೆಗೆ ರಾಜ್ಯದ ಅಭಿವೃದ್ಧಿಗಾಗಿ ನಾಡು ನುಡಿ, ಗಡಿ ಹೋರಾಟದ ಮನೋಭಾವ ಹೊಂದಿರುವ ಮತ್ತು ಭ್ರಷ್ಟಾಚಾರ ಮುಕ್ತ ಭಾರತದ ಕನಸನ್ನು ಕಂಡಿರುವ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ (ಕೆಆರ್ಎಸ್) ಅಭ್ಯರ್ಥಿಯಾಗಿ ಸ್ಪರ್ಧಿಸಿರುವುದಾಗಿ ನಿರುಪಾದಿ ಗೋಮರ್ಸಿ ಹೇಳಿದರು.

ಅವರು ಶುಕ್ರವಾರದಂದು ನಗರದ ಪತ್ರಿಕಾಭವನದಲ್ಲಿ ಸುದ್ದಿಗೋಷ್ಠಿದ್ದೇಶಿಸಿ ಮಾತನಾಡಿ ನನ್ನ ವೈಯಕ್ತಿಕ ಮಾಹಿತಿ, ಹೋರಾಟದ ಬಗ್ಗೆ ಪರಿಶೀಲಿಸಿ ಕೊಪ್ಪಳ ಲೋಕಸಭಾ ಚುನಾವಣೆಗೆ ಸ್ಪರ್ಧಿಸಲು ಕೆಆರ್ಎಸ್ ಪಕ್ಷ ಅವಕಾಶ ನೀಡಿದ್ದು,ಕೊಪ್ಪಳ ಮತ್ತು ರಾಯಚೂರು ಜಿಲ್ಲೆಯಲ್ಲಿ ಭ್ರಷ್ಟಾಚಾರದ ವಿರುದ್ಧ ಹೋರಾಟವನ್ನು ಮಾಡಿ, ಜನಸಾಮಾನ್ಯರ ಕಷ್ಟಕ್ಕೆ ಸ್ಪಂದಿಸಿದ್ದು ಕೊಪ್ಪಳ ಲೋಕಸಭಾ ಚುನಾವಣೆ ಪ್ರಜಾಪ್ರಭುತ್ವ ಮತ್ತು ರಾಜಪ್ರಭುತ್ವ ನಡುವಿನ ಹೋರಾಟ, ಸಾಮಾನ್ಯರು ಮತ್ತು ಸಂಪತ್ತುಳ್ಳ ಜನರ ನಡುವಿನ ಸ್ಪರ್ಧೆಯಾಗಿದೆ ಆದ್ದರಿಂದ ಬಹುಸಂಖ್ಯಾತರಾದ ಸಾಮಾನ್ಯ ಜನರು ಸಾಮಾನ್ಯನನ್ನೇ ಆಯ್ಕೆ ಮಾಡಬೇಕು" ದೇಶದಲ್ಲಿ ಪ್ರಜಾಪ್ರಭುತ್ವ ಉಳಿಯಬೇಕು. ದೇಶದಲ್ಲಿ ರಾಜ್ಯದಲ್ಲಿ ಕುಟುಂಬ ರಾಜಕಾರಣ, ಸಂಪತ್ತುಳ್ಳ ಅವರ ರಾಜ-ಕಾರಣ ನಿಲ್ಲಬೇಕು. ಸಾಮಾನ್ಯ ಜನರು ರಾಜ-ಕಾರಣಕ್ಕೆ ಬರಬೇಕು ಮತ್ತು ಅವರನ್ನು ಮತದಾರರು ಆಯ್ಕೆ ಮಾಡಬೇಕು,ಭ್ರಷ್ಟಾಚಾರದ ಕಗ್ಗತ್ತಲನ್ನು ಹೋಗಲಾಡಿಸಲು ಕೆಆರ್ಎಸ್ ಪಕ್ಷ ಪ್ರಾಮಾಣಿಕ ರಾಜಕಾರಣ ಮಾಡುತ್ತದೆ ಹೀಗಾಗಿ ಕೊಪ್ಪಳ ಲೋಕಸಭಾ ಕ್ಷೇತ್ರದ ಜನತೆ ಈ ಬಾರಿ ಕೆಆರ್ಎಸ್ ಪಕ್ಷವನ್ನು ಬೆಂಬಲಿಸುವತೆ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಕೆಆರ್ಎಸ್ ಪಕ್ಷ ಜಿಲ್ಲಾಧ್ಯಕ್ಷರಾದ ಆಶಾ ವಿರೇಶ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ.ಎಚ್.ಗೋಡಚಳ್ಳಿ, ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ಭಾವನಾ ಶಾಸ್ತ್ರಿ, ಜಿಲ್ಲಾ ಮಹಿಳಾ ಘಟಕದ ಪ್ರಧಾನ ಕಾರ್ಯದರ್ಶಿ ಸಾವಿತ್ರಿ ರಮೇಶ, ಕಾರ್ಯದರ್ಶಿ ಶಶಿಕಲಾ ಬನ್ನಟ್ಟಿ, ಉಪಸ್ಥಿತರಿದ್ದರು.

## ಲೋಕಸಭಾ ಚುನಾವಣೆ-2024

## ಚೆಕ್ ಪೋಸ್ಟ್‌ಗೆ ಭೇಟಿ ನೀಡಿದ ಜಿ.ಪಂ. ಸಿಇಓ ರಿಷಿ ಆನಂದ




**ವಿಜಯಪುರ :** ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಿಷಿ ಆನಂದ ರವರು ನಿಡಗುಂದಿ ತಾಲೂಕು ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿ 50ರ ಯಲಗೂರು ಕ್ರಾಸ್ ಬಳಿ ಚೆಕ್ ಪೋಸ್ಟ್ ಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಲೋಕಸಭಾ ಚುನಾವಣೆ 2024ರ ಹಿನ್ನೆಲೆಯಲ್ಲಿ ನಿಡಗುಂದಿ ತಾಲೂಕು ವ್ಯಾಪ್ತಿಯ ಯಲಗೂರು ಕ್ರಾಸ್ ಬಳಿ ಚೆಕ್ ಪೋಸ್ಟ್ ಆರಂಭಿಸಲಾಗಿದೆ.

ವಿಜಯಪುರ ಜಿಲ್ಲೆಯಿಂದ ಬಾಗಲಕೋಟೆ ಜಿಲ್ಲೆಗೆ ಪ್ರವೇಶಿಸಲು ಜಿಲ್ಲಾ ಗಡಿ ಭಾಗ ಚೆಕ್ ಪೋಸ್ಟ್ ಆರಂಭಿಸಲಾಗಿದೆ. ಕಂದಾಯ, ಪೋಲಿಸ್, ಕೆಬಿಜೆಎನ್ಎಲ್ ಸೇರಿದಂತೆ ವಿವಿಧ ಇಲಾಖೆಗಳ ಸಿಬ್ಬಂದಿಯವರನ್ನು ಕರ್ತವ್ಯಕ್ಕೆ ನಿಯೋಜಿಸಲಾಗಿದೆ.

ಈ ವೇಳೆ ಮಾತನಾಡಿದ ಜಿ.ಪಂ. ಸಿಇಓ ರಿಷಿ ಆನಂದ ರವರು ಲೋಕಸಭೆ ಚುನಾವಣಾ ನಿಮಿತ್ಯ ಮಾದರಿ ನೀತಿ ಸಂಹಿತೆ ಜಾರಿಗೆ ಯಾಗಿದ್ದು, ಜಿಲ್ಲೆಯಿಂದ ಹೊರಹೋಗುವ ಮತ್ತು ಆಗಮಿಸುವ ಎಲ್ಲ ವಾಹನಗಳನ್ನು ಕಟ್ಟುನಿಟ್ಟಾಗಿ ಪರಿಶೀಲನೆ ನಡೆಸಬೇಕು. ಹಣ, ಮದ್ಯ, ದಾಖಲೆ ಇಲ್ಲದ ವಸ್ತುಗಳು ಕಂಡು ಬಂದರೆ ತಕ್ಷಣ ಮೇಲಾಧಿಕಾರಿಗಳ ಗಮನಕ್ಕೆ ತಂದು ಕಾನೂನು ಕ್ರಮ ಕೈಗೊಳ್ಳಬೇಕು. ಪ್ರತಿ ವಾಹನ ತಪಾಸಣೆ ಮಾಡಿದ ವರದಿಯನ್ನು ವಹಿಯಲ್ಲಿ ದಾಖಲಿಸಬೇಕು ಎಂದು ಚೆಕ್ ಪೋಸ್ಟ್ ಸಿಬ್ಬಂದಿಯವರಿಗೆ ಸೂಚಿಸಿದರು. ಇದೇ ವೇಳೆ ಚೆಕ್ ಪೋಸ್ಟ್ ನ ವಹಿಯಲ್ಲಿ ನೋಂದಣಿ ಮಾಡಿದ ವಾಹನಗಳ ವಿವರಗಳನ್ನು ಖುದ್ದಾಗಿ ಪರಿಶೀಲಿಸಿದರು.

ಈ ಸಂದರ್ಭದಲ್ಲಿ ಚೆಕ್ ಪೋಸ್ಟ್ ಸಿಬ್ಬಂದಿ ಉಪಸ್ಥಿತರಿದ್ದರು.

## ಜಗತ್ತಿಗೆ ಶಾಂತಿ ಸಂದೇಶ ಸಾರಿದ ಯೇಸು ಕ್ರಿಸ್ತನನ್ನು ಶಿಲುಬೆಗೇರಿಸಿದ ದಿನವೇ ಶುಭಾ ಶುಕ್ರವಾರ

ದಿಟ್ಟ ಹೆಜ್ಜೆ ನ್ಯೂಸ್



**ಕವಿತಾಳ :** ಶುಭಾ ಶುಕ್ರವಾರವು ಕ್ರೈಸ್ತರಿಗೆ ಒಂದು ಪವಿತ್ರ ದಿನ ಕ್ರಿಸ್ಮಸ್ ಹೇಗೆ ಯೇಸು ಕ್ರಿಸ್ತನ ಜನನವನ್ನು ಸೂಚಿಸುತ್ತಯೋ ಹಾಗೇ ಶುಭಾ ಶುಕ್ರವಾರ ಯೇಸು ಕ್ರಿಸ್ತನ ಮರಣವನ್ನು ಸೂಚಿಸುತ್ತದೆ.

ಪಟ್ಟಣ ಕ್ರೈಸ್ತ ಯುವಕರು ಶುಭಾ ಶುಕ್ರವಾರ ದಿನದಂದು ಕ್ರಿಸ್ತನ ಮರಣದ ಯಾತನೆಯನ್ನು ರೂಪಕವಾಗಿ ಅಭಿನಯಿಸುವುದರ ಮೂಲಕ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಪ್ರದರ್ಶಿಸಿದರು.

2000 ವರ್ಷಗಳ ಹಿಂದೆ ಜಗತ್ತಿಗೆ ಶಾಂತಿ ಮಂತ್ರ ಪಠಿಸಿದ ಕ್ರಿಸ್ತ ಧರ್ಮಶಾಸ್ತ್ರಗಳ ಅನ್ಯಾಯ ವಿರುದ್ಧ ಹೋರಾಟ ಮಾಡಿದರು ಎಂದರೆ ತಪ್ಪಗಲಾರದು ಯಾಕಂದರೆ ಕ್ರಿಸ್ತನ ಜನನದ ಉದ್ದೇಶವೆ ಜಗತ್ತಿನಲ್ಲಿ ಶಾಂತಿ ಸಹನೆ ಸಮಾನತೆ ಪ್ರೀತಿ ಕರುಣೆ ಸಹ ಬಾಳ್ವೆ ಕ್ಷೆಮಯಿಂದ ಜೀವನ ನಡೆಸುವುದು ಕ್ರಿಸ್ತನ ಸಂದೇಶವಾಗಿದ್ದವು. ಅಂದಿನ ಧರ್ಮಶಾಸ್ತ್ರಿಗಳು ಪರಿಸಾಯರು ಯೀಸುವಿನ ಸಂದೇಶಗಳನ್ನು ಸಹಿಸಿದೆ ಪಿಲಾತನ ಬಳಿ ಕ್ರಿಸ್ತನನ್ನು ಒಬ್ಬ ಮಂತ್ರವಾದಿ ಎಂದು ಬಿಂಬಿಸಿ ಅವರನ್ನ ಬಂಧಿಸಿ ಯೇಸುವನ್ನು ಮರಣದಂಡನೆ ಶಿಕ್ಷೆಗೆ ಗುರಿ ಮಾಡಿ ಅವರನ್ನು ಶಿಲುಬೆಗೇರಿಸಲು ಅಲ್ಲಿನ ಧರ್ಮಶಾಸ್ತ್ರಿಗಳು ಪರಿಸಾಯರು ಯಶಸ್ವಿಯಾದರು ಅದರೂ ಕೂಡ ಯೇಸು ತಂದೆಯೇ ಇವರೇನು ಮಾಡಿತ್ತರೋ ಅವರು ಅರಿಯರು ಎಂದು ಕ್ಷೇಮೆ ದಯಾಪಾಲಿಸಿದ ಕರುಣಾಮಯಿ ಈ ಕ್ರಿಸ್ತ. ಅಂತಹ ಮಹಾಪುರುಷನ ಜೀವನ ಮರಣದ ಯಾತನೆಯನ್ನು ರೂಪಕದ ಮೂಲಕ ಪ್ರದರ್ಶನ ಮಾಡಿದ್ದು ಅದ್ಭುತವಾಗಿತ್ತು.

ಪಟ್ಟಣದ ಧರ್ಮ ಕೇಂದ್ರದ ಗುರುಗಳಾದ ಫಾ ವಿಜಯರಾಜ್ ಘಂಟ್ಯಾಳ, ಸಹಾಯಕ ಗುರುಗಳಾದ ಚಂದ್ರಕಾಂತ, ಶೇವಾಶ್ರಮದ ಮುಖ್ಯಸ್ಥರಾಧ ಸಿಸ್ಟರ್ ಲೀಡಿಯಾ, ಸಿಸ್ಟರ್ ಅಂಜಲಿ, ಸಿಸ್ಟರ್ ಸುಶೀಲಾ, ಸಿಸ್ಟರ್ ಸೋನಿ, ಸಿಸ್ಟರ್ ಅಲ್ಫಾನ್ಸೋ, ಸಿಸ್ಟರ್ ಹಿಲ್ಡಾ, ಸಿಸ್ಟರ್ ವಿನೂತ, ಪಾಲನ ಸಮಿತಿ ಸದಸ್ಯರು, ಪಟ್ಟಣದ ಕ್ರೈಸ್ತ ಭಕ್ತರು ಭಾಗವಹಿಸಿದ್ದರು.

## ಸರ್ಕಾರಗಳು ಜಾನಪದ ಕಲೆಗಳನ್ನು ಪ್ರೋತ್ಸಾಹಿಸಬೇಕು: ಜಿ. ಕೆ. ತಳವಾರ




**ಬಾಗಲಕೋಟೆ :** ಜನಪದ ಸಂಸ್ಕೃತಿ, ಪರಂಪರೆ ಮರೆತರೆ ಆ ದೇಶಕ್ಕೆ ಬಹಳ ದಿನ ಉಳಿಗಾಲವಿಲ್ಲ. ಸರ್ಕಾರಗಳು ಜಾನಪದ ಕಲೆಗಳನ್ನು ಪ್ರೋತ್ಸಾಹಿಸಬೇಕು. ಜಾನಪದ ಕಲಾವಿದರನ್ನು ಗೌರವಿಸಬೇಕೆಂದು ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ ಕಾರ್ಯಕಾರಿಣಿ ಸದಸ್ಯ ಜಿ. ಕೆ. ತಳವಾರ ಹೇಳಿದರು.

ನವನಗರದ ಅನು ಮ್ಯೂಜಿ-ಕ್ ಫೌಂಡೇಶನ್‌ನಲ್ಲಿ ಕನ್ನಡ ಜಾನಪದ ಪರಿಷತ್ ತಾಲೂಕು ಮತ್ತು ಜಿಲ್ಲಾ ಘಟಕ ಬಾಗಲಕೋಟೆ ಇವರ ಸಂಂ-ಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ 9ನೇ ಸಂಸ್ಥಾಪನಾ ದಿನಾಚರಣೆಯನ್ನು ಜಾನಪದ ತ್ರಿಪದಿ ವಾಚಿಸುವ ಮೂಲಕ ಉದ್ಘಾಟಿಸಿ ಮಾತನಾಡಿ,

ರಾಜ್ಯದಲ್ಲಿ ಡಾ. ಎಸ್. ಬಾಲಾಜಿ, ಜಿಲ್ಲೆಯಲ್ಲಿ ಡಿ. ಎಂ. ಸಾವಕಾರ ಸಾರಥ್ಯದಲ್ಲಿ ಪರಿಷತ್ ಒಳ್ಳೆಯ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಕಲಾವಿದರಿಗೆ ವೇದಿಕೆ ಕಲ್ಪಿಸುತ್ತಿದೆ ಎಂದರು.

ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಡಿ. ಎಂ. ಸಾವಕಾರ ಅಧ್ಯಕ್ಷತೆ ವಹಿಸಿ ಮಾತನಾಡಿ, ಬುಡಕಟ್ಟು ಹಾಗೂ ನಾಡಿನ ಜಾನಪದ ಕಲೆ ಸಂಸ್ಕೃತಿಯನ್ನು ಉಳಿಸಲು ಮತ್ತು ಎಲೆಮರೆ ಕಾಯಿಯಂತಿ-ರುವ ಜಾನಪದ ಕಲಾವಿದರನ್ನು ಉಳಿಸಿ ಬೆಳೆಸಲು ಪರಿಷತ್ ಸ್ಥಾಪಿಸಲಾಗಿದೆ ಎಂದು ಹೇಳಿದರು.

ರಾಜ್ಯಾಧ್ಯಕ್ಷ ಡಾ. ಎಸ್. ಬಾಲಾಜಿ ರಾಜ್ಯದಲ್ಲಿ ಮಾತ್ರವಲ್ಲ, ಗಡಿನಾಡಿನಲ್ಲಿ, ಹೊರ ರಾಜ್ಯಗಳಲ್ಲಿಯೂ ಜಾನಪದ ಕಾರ್ಯಕ್ರಮಗಳನ್ನು ಆಯೋಜಿಸುವ ಕೆಲಸ ಮಾಡುತ್ತಿದ್ದು, 50 ವರ್ಷ ಮೀ-ರಿದ ಎಲೆಮರೆಯ ಕಾಯಿಯಂತಿರುವ ಜಾನಪದ ಕಲಾವಿದರನ್ನು ಗುರ್ತಿಸಿ, ರಾಜ್ಯಮಟ್ಟದಲ್ಲಿ 'ಜಾನಪದ ಪ್ರಪಂಚ ಪ್ರಶಸ್ತಿ' ನೀಡಿ ಗೌರವಿಸುತ್ತಿರುವರು ಎಂದು ಹೇಳಿದರು.

ಕಳೆದ 9 ವರ್ಷಗಳಲ್ಲಿ ರಾಜ್ಯಾದ್ಯಂತ ಸುಮಾರು 8 ಸಾವಿರ ಕಾರ್ಯಕ್ರಮಗಳನ್ನು ಆಯೋಜಿಸಿ ಯಶಸ್ವಿಗೊಳಿಸಲಾಗಿದ್ದು. ಶಾಲೆ, ಕಾಲೇಜುಗಳಲ್ಲಿ ವಿಕಾಸಕ್ಕಾಗಿ ಜಾನಪದ ಕಾರ್ಯಕ್ರಮ ಆಯೋಜಿಸಿ, ಜಾನಪದ ಕಲೆ, ಕಲಾವಿದರ ಪರಿಚಯ, ಗ್ರಾಮೀಣ ಪ್ರದೇಶದಲ್ಲಿ ಹಬ್ಬಗಳ ವೈಶಿಷ್ಟ್ಯ, ಮಹತ್ವವನ್ನು ತಿಳಿಸುವ ಕಾರ್ಯ ಮಾಡಲಿದೆ ಎಂದರು.

ರಂಗಕರ್ಮಿ ಎಚ್. ಎನ್. ಶೇಬನ್ನವರ ಸನ್ಮಾನ ಸ್ವೀಕರಿಸಿ ಮಾತನಾಡಿ, ಜನಪದ ಕಲೆ ಮತ್ತು ಸಾಹಿತ್ಯ ನಮ್ಮ ಉಸಿರಾಗಬೇಕು. ಕಲೆ ಉಳಿದರೆ ಕಲಾವಿದರು ಉಳಿಯಲು ಸಾಧ್ಯ. ನಿಜವಾದ ಕಲಾವಿದ-ರಿಗೆ ಮಾಸಾಶನ ದೊರೆಯಬೇಕು. ಅರ್ಹ ಕಲಾವಿದರು ಮಧ್ಯವರ್ತಿಗಳನ್ನು ತಿರಸ್ಕರಿಸಿ, ನೇರವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಹೋಗಿ ಅರ್ಜಿ ಹಾಕಿ ಸೌಲಭ್ಯ ಪಡೆದುಕೊಳ್ಳಬೇಕೆಂದು ಹೇಳಿದರು.

ಸನ್ಮಾನ: ಹಿರಿಯ ರಂಗಕರ್ಮಿ ಎಚ್. ಎನ್. ಶೇಬನ್ನವರ, ಸಮಾಜ ಸೇವಕ ಸುರೇಶ ವಸ್ತ್ರದ, ಜಾನಪದ ಕಲಾವಿದ ಪುಟ್ಟು ಹಿರೇಮಠ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು.

ಜಾನಪದ ಕಲಾವಿದೆ ಪವಿತ್ರಾ ಜಕ್ಕಪ್ಪನವರ, ಶಿಕ್ಷಕ ಎಂ. ಎಸ್. ಕಲಗುಡಿ ಜಾನಪದ ಹಾಡುಗಳನ್ನು ಹಾಡಿ ರಂಜಿಸುವಲ್ಲಿ ಯಶಸ್ವಿಯಾದರು.

ಕಜಾಪ ಜಿಲ್ಲಾ ಕಾರ್ಯದರ್ಶಿ ಆರ್. ಬಿ. ನಬಿವಾಲೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಘಟನಾ ಕಾರ್ಯದರ್ಶಿ ಎಸ್. ಬಿ. ಕೋರಿ ಪರಿಚಯಿಸಿದರು.

ವೇದಿಕೆ ಮೇಲೆ ಕಜಾಪ ತಾಲೂಕಾಧ್ಯಕ್ಷ ಎಸ್. ಬಿ. ಕಟಗಿ, ಪದಾಧಿಕಾರಿಗಳಾದ ವಿ. ಜಿ. ಪಾಟೀಲ, ಎಸ್. ಬಿ. ಯಾವಗಲ್‌ಮಠ, ಸಂಜಯ ನಡುವಿನಮನಿ, ನಾರಾಯಣ ಯಳ್ಳಿಗುತ್ತಿ, ಮುತ್ತು ಅರಕೇರಿ, ಗುರು ಹಿರೇಮಠ, ಪ್ರಶಾಂತ ಪ್ರಭುಕರ, ಮುತ್ತು ಮಾಚಕನೂರ ಮತ್ತಿತರಿದ್ದರು.

## ತೇರದಾಳದಲ್ಲಿ ಕಾಂಗ್ರೆಸ್ ಸಭೆ

# ಕುಟುಂಬದಲ್ಲಿ ಭಿನ್ನಾಭಿಪ್ರಾಯ ಸಹಜ-ಸಂಯುಕ್ತಾ ಪಾಟೀಲ



**ತೇರದಾಳ :** ಒಂದು ಮನೆ ಅಂದಮೇಲೆ ಭಿನ್ನಾಭಿಪ್ರಾಯಗಳು ಸಹಜ. ಆದರೆ ಮನೆ ವಿಭಜನೆ ಆಗುವುದಿಲ್ಲ ಎಂದು ಲೋಕಸಭೆ ಕಾಂಗ್ರೆಸ್ ಅಭ್ಯರ್ಥಿ ಸಂಯುಕ್ತಾ ಪಾಟೀಲ್ ಪಕ್ಷದಲ್ಲಿನ ಬೆಳವಣಿಗೆ ಕುರಿತು ಮೇಲಿನಂತೆ ಪ್ರತಿಕ್ರಿಯೆ ನೀಡಿದರು.

ಶನಿವಾರ ಸಂಜೆ ಇಲ್ಲಿನ ಕೆಚ್‌ಡಿಸಿ ನಿಗಮದ ಮಾಜಿ ನಿರ್ದೇಶಕ ಪ್ರವೀಣ ನಾಡಗೌಡ ಮನೆಯಲ್ಲಿ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದರು. ಪಕ್ಷದಲ್ಲಿನ ಎಲ್ಲ ಬೆಳವಣಿಗೆಯೂ ಸರಿ ಹೋಗಲಿದೆ. ಅದಕ್ಕೆ ಕಾರ್ಯಕರ್ತರು ತಲೆ ಕೆಡಿಸಿಕೊಳ್ಳುವುದು ಬೇಡ. 20 ವರ್ಷಗಳಿಂದ ಬಾಗಲಕೋಟೆ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವಿಗಾಗಿ ಪಕ್ಷದ ಮುಖಂಡರು ಕಾರ್ಯಕರ್ತರು ಶ್ರಮಿಸುತ್ತಿದ್ದಾರೆ. ಅದು ಈ ಬಾರಿ ನಿಶ್ಚಿತವಾಗಿಯೂ ನಡೆಯಲಿದೆ ಎಂದು ತಮ್ಮ ಗೆಲುವಿನ ಬಗ್ಗೆ ವಿಶ್ವಾಸ ವ್ಯಕ್ತಪಡಿಸಿದರು. ಮುಖಂಡ ಸಿದ್ದು ಕೊಣ್ಣೂರ, ಬೂತ್ ಮಟ್ಟದಿಂದ ಕಾರ್ಯಕರ್ತರು ಸಂಘಟಿತ ಹೋರಾಟ ನಡೆಸಬೇಕು. ವಿಧಾನ ಸಭೆ ಚುನಾವಣೆಯಲ್ಲಿ ನನಗೆ ನೀಡಿದ ಬೆಂಬಲಗಿಂತ ಹೆಚ್ಚು ಸಂಯುಕ್ತಾ ಪಾಟೀಲ ಅವರಿಗೆ ನೀಡಬೇಕೆಂದು ಮನವಿ ಮಾಡಿದರು. ಪ್ರವೀಣ ನಾಡಗೌಡ ಮಾತನಾಡಿ, ತೇರದಾಳ ಪಟ್ಟಣದಲ್ಲಿನ ಎಲ್ಲ ಕಾಂಗ್ರೆಸ್ ಕಾರ್ಯಕರ್ತರು ಒಗ್ಗಟ್ಟಿನಿಂದ ಅಭ್ಯರ್ಥಿ ಪರವಾಗಿ ಕೆಲಸ ಮಾಡುವುದಾಗಿ ಭರವಸೆ ನೀಡಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಮಲ್ಲಪ್ಪ ಸಿಂಗಾಡಿ, ಲಕ್ಷ್ಮಣ ದೇಸಾರಟ್ಟಿ, ನಗರ ಘಟಕ ಅಧ್ಯಕ್ಷ ಅಶೋಕ ಆಳಗೊಂಡ, ಪುರಸಭೆ ಕಾಂಗ್ರೆಸ್ ಸದಸ್ಯರು, ಮುಖಂಡರು, ಯುವಕರು ಪಾಲ್ಗೊಂಡಿದ್ದರು. ಇದಕ್ಕೂ ಮೊದಲು ಕ್ಷೇತ್ರಾಧಿಪತಿ ಅಲ್ಲಮಪ್ರಭುದೇವರ ದೇವಸ್ಥಾನಕ್ಕೆ ತೆರಳಿ ಪ್ರಭುದೇವರ ದರ್ಶನ ಪಡೆದು ಅರ್ಚಕರಿಂದ ಆಶೀರ್ವಾದ ಪಡೆದುಕೊಂಡರು.



ರಬಕವಿಯ ಚಾವಡಿ ಗಲ್ಲಿಯಲ್ಲಿ ಪ್ರತಿಷ್ಠಾಪಿಸಲಾದ ಕಾಮಣ್ಣ ಪಾನಬೀಡಾ ವ್ಯಾಪಾರಿಯಾಗಿ ಕುಳಿತಿರುವದು ನೋಡುಗ ಗಮನ ಸೆಳೆಯಿತು.

# ಕಾಮದಹನಕ್ಕೆ ಸೌದೆ, ಬಡವರಿಗೆ ಬಾಧೆ



**ಚಿಮ್ಮಡ :** ಹೋಳಿ ಹಬ್ಬದ ನಿಮಿತ್ಯ ನಡೆಯುವ ಕಾಮದಹಣದ ಸಂಭ್ರಮಕ್ಕಾಗಿ ಸಂಗ್ರಹಿಸಲಾಗುವ ಸೌದೆ, ಕಟ್ಟಿಗೆಯ ಜೊತೆಗೆ ಉಪಯುಕ್ತ ವಸ್ತುಗಳನ್ನು ಎತ್ತಿಕೊಂಡು ಬಂದು ಗುಡ್ಡೆಹಾಕಿ ದಹಿಸುವುದರಿಂದ ಲಕ್ಷಾಂತರ ರೂ. ಬೆಲೆಬಾಳುವ ಅಮೂಲ್ಯ ವಸ್ತುಗಳು ಸುಟ್ಟು ಕರಕಲಾಗುತ್ತಿರುವ ಪರಿಣಾಮ ಅವುಗಳನ್ನು ಕಳೆದುಕೊಂಡವರು ಪರಿತಪಿಸುವಂತಾಗಿದೆ.

ಕಾಮನ ಹಬ್ಬದ ಪ್ರತೀತಿಯಂತೆ ರೈತರ ಮನೆಯಲ್ಲಿ ನಿರೂಪಯುಕ್ತವಾಗಿ ಬಿದ್ದಿರುವ ಕಟ್ಟಿಗೆಯ ವಸ್ತುಗಳು, ಗದ್ದೆಯಲ್ಲಿ ದೊರೆಯುವ ನಿರುಪಯೋಗಿ ಸೌದೆಗಳನ್ನು ಮನೆಯ ಮಾಲೀಕನಿಂದ ಪಡೆದು ಅವುಗಳನ್ನು ಸಂಗ್ರಹಿಸಿ ದಹಿಸಬೇಕು ಆದರೆ ಇಲ್ಲಿ ಸಾವಿರಾರು ರೂ ಬೆಲೆಬಾಳುವ ತೊಲೆಗಳು, ನಾಟುಗಳು, ಏಣಿ, ಮನೆಯ ಚೌಕಟ್ಟು, ಕುರ್ಚಿ, ಟೈರು ಸೇರಿದಂತೆ ಹಲವಾರು ಉಪಯುಕ್ತ ವಸ್ತುಗಳು ಮಾತ್ರವಲ್ಲದೇ ಮಗಳ ಬಾನಂತನಕ್ಕಾಗಿ ತಾಯಿ ಸಂಗ್ರಹಿಸಿಟ್ಟಿದ್ದ ಕುಳ್ಳು (ಸಗಣಿಯ ಬೆರಣಿ)ಗಳನ್ನು ಸಹ ರಾತ್ರಿ ವೇಳೆಯಲ್ಲಿ ಎತ್ತಿಕೊಂಡು ಬಂದು ಧಹಿಸಲು ಗುಡ್ಡೆ ಹಾಕಲಾಗಿದ್ದು ಇದರಿಂದ ವಸ್ತುಗಳನ್ನು ಕಳೆದುಕೊಂಡವರು ಮಮ್ಮಲ ಮರಗುವಂತಾಗಿದೆ ಸಂಬಂದಿಸಿದವರು ಇದಕ್ಕೆ ಕಡಿವಾಣ ಹಾಕಬೇಕಾಗಿದೆ.

> "ಹಬ್ಬ ಆಚರಣೆ ಪ್ರತಿಯೊಬ್ಬರಿಗೂ ಖುಷಿ, ಸಂತೋಷ ತರಬೇಕು ಆದರೆ ಹಲವರುಮಾಡುವತಪ್ಪುಗಳಿಂದಬಡವರು ಹಾನಿ ಅನುಭವಿಸುವಂತಾಗಬಾರದು. ಕಾಮದಹನದ ನೆಪದಲ್ಲಿ ಬೆಲೆಬಾಳುವ ವಸ್ತುಗಳನ್ನು ಬೆಂಕಿಯಲ್ಲಿ ದಹಿಸುವುದರಿಂದ ರಾಷ್ಟ್ರೀಯ ಸಂಪತ್ತಿಗೂ ಹಾನಿ ಮಾಡಿದಂತಾಗುತ್ತದೆ. ಇಂತಹ ತಪ್ಪು ಯಾರೂ ಮಾಡಬಾರದು. ಇದರಿಂದ ಬಡವರ ಕಣ್ಣೀರಿನ ಶಾಪಕ್ಕೆ ಗುರಿಯಾಗಬೇಕಾಗುತ್ತದೆ.
>
> ◆ ಶ್ರೀಪ್ರಭುಮಹಾಸ್ವಾಮಿಗಳು ವಿರಕ್ತಮಠಚಿಮ್ಮಡ.

> "ಕಾಮದಹನದ ಇತಿಹಾಸದಂತೆ ಊರಿನವರಿಂದ ಮನೆಗಳಲ್ಲಿ ಸಿಗುವ ಬೇಡದತಂದುಗುಡ್ಡೆಹಾಕಬೇಕು,ರಾತ್ರಿಯಲ್ಲಿ ಹುಡುಗರಿಗೆ ಶಿಖಂಡಿಯ ವೇಶ ಹಾಕಿಸಿ ಪ್ರತಿಯೊಬ್ಬ ಹುಡುಗ ಐದು ಮನೆಗಳಿಗೆ ತೆರಳಿ ಅವರಿಗೆ ಬೇಡದ ವಸ್ತುಗಳನ್ನು ಭಿಕ್ಷೆ ಬೇಡಿ ತಂದು ಗುಡ್ಡೆಹಾಕಿ ಅದಕ್ಕೆ ಬೆಂಕಿ ಇಡುವ ಮೂಲಕ ಕಾಮದಹನದ ಹಬ್ಬ ಆಚರಿಸಬೇಕು. ಉಪಯುಕ್ತ ವಸ್ತುಗಳನ್ನು ದಹಿಸುವ ಪಾಪಕಾರ್ಯ ಯಾವತ್ತಿಗೂ ಮಾಡಬಾರದು.
>
> ◆ ಶ್ರೀ ಜನಾರ್ಧನ ಮಹಾರಾಜರು ರಘುನಾಥ ಪ್ರೀಯ ಸಾಧು ಮಹಾರಾಜರ ಮಠ ಚಿಮ್ಮಡ.

# ತೇರದಾಳ ಚೆಕ್ ಪೋಸ್ಟ್ ಮೊತ್ತದು ಪ್ರಕರಣ ದಾಖಲೆ ಇಲ್ಲದ 1.99 ಲಕ್ಷ ಹಣ ವಶ



**ತೇರದಾಳ :** ಇಲ್ಲಿನ ಕುಡಚಿ ರಸ್ತೆಯ ನಾಲ್ಕನೇ ಕಾಲುವೆ ಹತ್ತಿರ ಲೋಕಸಭೆ ಚುನಾವಣೆ ನಿಮಿತ್ತ ನಿರ್ಮಿಸಿರುವ ಚೆಕ್‌ಪೋಸ್ಟ್‌ನಲ್ಲಿ ಭಾನುವಾರ ಎರಡು ಕಾರಿನಲ್ಲಿ ದಾಖಲೆ ಇಲ್ಲದೆ ತಗೆದುಕೊಂಡು ಹೋಗುತ್ತಿದ್ದ 1.99 ಲಕ್ಷ ಹಣವನ್ನು ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ನೆರೆಯ ಬೆಳಗಾವಿ ಜಿಲ್ಲೆಯ ಹಾರೂಗೇರಿ ಕಡೆಯಿಂದ ಬರುತ್ತಿದ್ದ ಕಾರುಗಳನ್ನು ಪರಿಶೀಲನೆ ನಡೆಸಿದಾಗ ಒಂದು ಕಾರಿನಲ್ಲಿ 1 ಲಕ್ಷ ಹಾಗೂ ಇನ್ನೊಂದು ಕಾರಿನಲ್ಲಿ 99000 ಸಾವಿರ ಹಣ ದೊರೆತಿದ್ದು, ಹಣದ ಕುರಿತು ಸೂಕ್ತ ದಾಖಲೆ ಇಲ್ಲದ ಕಾರಣ ಅಧಿಕಾರಿಗಳು ಹಣವನ್ನು ವಶಪಡಿಸಿಕೊಂಡಿದ್ದಾರೆ. ಕಳೆದ ವಾರ ಕೂಡ ಕಾರಿನಲ್ಲಿ ದಾಖಲೆ ಇಲ್ಲದೆ ತಗೆದುಕೊಂಡು ಹೋಗುತ್ತಿದ್ದ 1.72 ಲಕ್ಷ ಹಣವನ್ನು ತೇರದಾಳ ಚೆಕ್‌ಪೋಸ್ಟ್‌ನಲ್ಲಿ ಅಧಿಕಾರಿಗಳು ವಶಪಡಿಸಿಕೊಂಡಿದ್ದರು.

ಚುನಾವಣಾ ಜಾಗೃತ ದಳ ಸಿಬ್ಬಂದಿ ಶಿವಮೂರ್ತಿ, ಪಿಎಸ್‌ಐ ಅಪ್ಪು ಐಗಳಿ, ಎಎಸ್ಸೈ ಎಲ್.ಬಿ. ಮಾಳಿ, ಅಬಕಾರಿ ಇಲಾಖೆಯ ಅರುಣಕುಮಾರ ಜುಲ್ಪಿ, ಪಿ.ಎಸ್. ನರಸಣ್ಣವರ, ಪ್ರತಾಪ ಕೊಡುಗೆ, ರಮೇಶ ಮೇತ್ರಿ, ವಿವೇಕ ಸುವರ್ಣಖಂಡಿ, ವಿಠ್ಠಲ ಮಾನೆ ಇದ್ದರು.

# ನಿಟ್ಟುಸಿರುದಿಂದ ಪರೀಕ್ಷೆ ಬರೆದ ವಿದ್ಯಾರ್ಥಿಗಳು ಮೊದಲ ಪರೀಕ್ಷೆಗೆ 14 ವಿದ್ಯಾರ್ಥಿಗಳು ಗೈರು



**ತೇರದಾಳ :** ಹೋಳಿ ಹಬ್ಬದ ನಡುವೆಯೂ ಯಾವುದೇ ತೊಂದರೆ ಇಲ್ಲದೆ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳು ಮೊದಲ ಪರೀಕ್ಷೆ ಬರೆದರು.

ಪಟ್ಟಣದಲ್ಲಿ ಸಿದ್ದೇಶ್ವರ ಪ್ರೌಢಶಾಲೆ, ಎಸ್.ಎಂ. ಪ್ರೌಢಶಾಲೆ ಹಾಗೂ ಪ್ರಭುಲಿಂಗ ಪಪೂ ಮಹಾ ವಿದ್ಯಾಲಯದಲ್ಲಿ ಮೂರು ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ತೇರದಾಳ ಹಾಗೂ ಗೋಲಭಾವಿ ಸಸಾಲಟ್ಟಿ ಕಾಲತಿಪ್ಪಿ ಹಳಿಂಗಳಿ ತಮದಡ್ಡಿ ಹಾಗೂ ಹನಗಂಡಿ ಗ್ರಾಮದ ವಿದ್ಯಾರ್ಥಿಗಳು ಪರೀಕ್ಷೆಗೆ ಆಗಮಿಸಿದ್ದರು. ಬಣ್ಣ ಆಡುವವರು ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆ ನೀಡಬಾರದು ಎಂದು ಪೊಲೀಸ್ ಇಲಾಖೆ ಮೊದಲೆ ಸಾಕಷ್ಟು ಸೂಚನೆಗಳನ್ನು ನೀಡಿತ್ತು. ಅಲ್ಲದೆ ಸೋಮವಾರ ಬೆಳಗ್ಗೆ ಪೊಲೀಸ್ ಸಿಬ್ಬಂದಿ ಪರೀಕ್ಷೆ ಕೇಂದ್ರಗಳ ಸುತ್ತ ರೌಂಡ್ಸ್ ಮಾಡುವ ಮೂಲಕ ನಿಗಾ ವಹಿಸಿದರು. ಪಿಎಸ್‌ಐ ಅಪ್ಪು ಐಗಳಿ ಕೇಂದ್ರಗಳಿಗೆ ಬೇಟಿ ನೀಡಿ ಪರಿಶೀಲಿಸಿದರು. ಕೇಂದ್ರಗಳ ಅಧೀಕ್ಷಕಾರಿ ಡಿ.ಬಿ. ಪಾಟೀಲ. ಎಸ್.ಎನ್. ಹತ್ತಿ, ಬಿ.ಎಸ್. ಕಡಕೋಳ ಕರ್ತವ್ಯ ನಿರ್ವಹಿಸಿದರು. ಅದರಂತೆ ಸಿಆರ್‌ಪಿಗಳಾಗ ಎ.ಆರ್. ಮುಧೋಳ, ಭರತೇಶ ಯಲ್ಲಟ್ಟಿ, ಮಹೇಶ ಸೋರಗಾಂವಿ ಮೊಬೈಲ್ ಸಮನ್ವಯಾಧಿಕಾರಿಗಳಾಗಿ ಕರ್ತವ್ಯ ನಿಭಾಯಿಸಿದರು.

## ಶ್ರೀ ರೇಣುಕಾಚಾರ್ಯರ ಜಯಂತ್ಯುತ್ಸವ

# ರೇಣುಕಾಚಾರ್ಯರು ಬೋಧಿಸಿದ ತತ್ವಗಳು ವಿಶ್ವಕ್ಕೆ ಮಾದರಿ: ಬಸವರಾಜ ಸ್ವಾಮಿಜಿ



**ಮಹಾಲಿಂಗಪುರ :** ಧರ್ಮ ಸ್ಥಾಪಕ ಜಗದ್ಗುರು ರೇಣುಕಾಚಾರ್ಯರು ಯಾವುದೇ ಜಾತಿ, ಮತ ಪಂಥವನ್ನು ನೋಡದೆ ಮಾನವ ಧರ್ಮಕ್ಕೆ ಜಯವಾಗಲಿ, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎಂಬ ಸಂದೇಶ ನೀಡಿದ್ದಾರೆ ಎಂದು ಕಳ್ಳಿಗುದ್ದಿ-ಕಪರಟ್ಟಿಯ ಗುರುದೇವಾಶ್ರಮದ ಬಸವರಾಜ ಸ್ವಾಮಿಜಿ ಹೇಳಿದರು.

ರವಿವಾರ ಜಂಗಮ ಸಮಾಜದ ವತಿಯಿಂದ ಹಮ್ಮಿಕೊಂಡ ಜಗದ್ಗುರು ಶ್ರೀ ರೇಣುಕಾಚಾರ್ಯರ ಜಯಂತ್ಯುತ್ಸವ ಕಾರ್ಯಕ್ರಮದ ಸಾನಿಧ್ಯವಹಿಸಿ ಅವರು ಮಾತನಾಡಿ, ರೇಣುಕಾಚಾರ್ಯರು ಬೋಧಿಸಿದ ಮಾನವೀಯ ಮೌಲ್ಯವುಳ್ಳ ತತ್ವಗಳು ವಿಶ್ವಕ್ಕೆ ಮಾದರಿಯಾಗಿವೆ. ಅವುಗಳನ್ನು ಆಚರಣೆಗೆ ತರಬೇಕು. ಸಮಾಜದ ಶ್ರೇಷ್ಠ ಮತ್ತು ಪೂಜ್ಯನೀಯ ಸ್ಥಾನದಲ್ಲಿರುವ ಜಂಗಮ ಸಮಾಜದ ಯುವಕರು ದುಶ್ಚಟಗಳಿಂದ ದೂರವಿರಬೇಕು ಎಂದರು.

ಜಗದ್ಗುರು ರೇಣುಕಾಚಾರ್ಯ ಭಾವಚಿತ್ರಕ್ಕೆ ಜಂಗಮ ಸಮಾಜದ ಹಿರಿಯರು ಪೂಜೆ ಸಲ್ಲಿಸಿದರು. ವೀರಶೈವ ಜಂಗಮ ಸಮಾಜದ ಅಧ್ಯಕ್ಷ ಗುರುಪಾದಯ್ಯ ಛಟ್ಟಿಮಠ ಅಧ್ಯಕ್ಷತೆವಹಿಸಿದ್ದರು. ಸಮಾಜದ ಹಿರಿಯರಾದ ಗುರಲಿಂಗಯ್ಯಾ ಮಠಪತಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಮಾಜದ ವತಿಯಿಂದ ಪೂಜ್ಯರನ್ನು ಸನ್ಮಾನಿಸಲಾಯಿತು.

ಮುಖಂಡರಾದ ಮಹಾಂತೇಶ ಹಿಟ್ಟಿನಮಠ, ಡಾ.ವಸಂತ ಮಮದಾಪೂರಮಠ, ಎಂ.ಆರ್.ಹಿರೇಮಠ, ಬಸವರಾಜ ಹಿಟ್ಟಿನಮಠ, ಶ್ರೀಶೈಲಪ್ಪ ವಜ್ಜರಮಟ್ಟಿ, ಸಾಗರ ಮಠದ, ವಿರೂಪಾಕ್ಷಯ್ಯ ಪಂಚಕಟ್ಟಿಮಠ, ನ್ಯಾಯವಾದಿ ಎಂ.ಎಸ್.ಮನ್ನಯ್ಯನವರಮಠ, ಸದಾಶಿವ ಹಿರೇಮಠ, ಈರಣ್ಣ ಚಟ್ಟಿಮಠ, ಎಂ.ಎಸ್.ತೆಗ್ಗಿನಮಠ, ಸಿ.ಎಸ್. ಮಠಪತಿ, ಬಸಯ್ಯ ಚಟ್ಟಿಮಠ, ಈಶ್ವರ ಮಠದ, ಚನ್ನಯ್ಯ ಮುಸಗುಪ್ಪಿಮಠ, ಸಂಪತ ಕಡಪಟ್ಟಿ, ಮಹಾಂತೇಶ ಮನ್ನಯ್ಯನವರಮಠ, ಚನ್ನಯ್ಯ ಮುಸಗುಪ್ಪಿಮಠ, ಮಹೇಶ ಮನ್ನಯ್ಯನವರಮಠ, ಪ್ರಭು ಮಠದ ಸೇರಿದಂತೆ ಸಮಾಜದ ಇದ್ದರು. ಕೆ.ಎಸ್.ಹಿರೇಮಠ ಸ್ವಾಗತಿಸಿದರು. ಮಹಾಲಿಂಗಯ್ಯ ನಿರೂಪಿಸಿದರು. ಸ್ವಾಗತಿಸಿದರು. ಬಿ.ಎನ್. ಅಯ್ಯನಗೌಡ್ರ ವಂದಿಸಿದರು.



ಬನಹಟ್ಟಿಯ ಸೋಮವಾರ ಪೇಟೆಯಲ್ಲಿ ಸೋಮವಾರ ಹೋಳಿ ಹಬ್ಬದ ಅಂಗವಾಗಿ ಮಹಿಳೆಯರು ಪರಸ್ಪರ ಬಣ್ಣ ಎರಚಿ ಸಂಭ್ರಮಿಸಿದರು.

# ಶ್ರೀಶೈಲ ಪಾದಯಾತ್ರಿಕರಿಗೆ ಉಚಿತ ಔಷಧ ವಿತರಣೆ



**ಮಹಾಲಿಂಗಪುರ :** ಪಟ್ಟಣದ ಮುಧೋಳ ರಸ್ತೆಯ ದ್ವಾರಬಾಗಿಲು ಹತ್ತಿರ ಪಟ್ಟಣದ ಔಷಧ ವ್ಯಾಪಾರಿಗಳಿಂದ ಶ್ರೀಶೈಲ ಪಾದಯಾತ್ರಿಕರಿಗೆ ಉಚಿತ ಮಾತ್ರೆಗಳು ಮತ್ತು ಔಷಧ ವಿತರಣೆ ಕಾರ್ಯಕ್ರಮಕ್ಕೆ ರವಿವಾರ ಚಾಲನೆ ನೀಡಲಾಯಿತು.

ಡಾ.ಎ.ಆರ್.ಬೆಳಗಲಿ ಔಷಧ ವಿತರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ ಕಳೆದ ಹತ್ತಾರು ವರ್ಷಗಳಿಂದ ಪಟ್ಟಣದ ಎಲ್ಲಾ ಔಷಧ ವ್ಯಾಪಾರಸ್ಥರು ಪ್ರತಿವರ್ಷ ಶ್ರೀಶೈಲಕ್ಕೆ ಹೋಗುವ ಭಕ್ತರಿಗೆ ಉಚಿತ ಮಾತ್ರೆಗಳು ಮತ್ತು ಔಷಧಗಳ ವಿತರಣೆಯ ಮೂಲಕ ಆರೋಗ್ಯ ಸೇವೆ ಸಲ್ಲಿಸುತ್ತಿರುವದು ಶ್ಲಾಘನೀಯ ಎಂದರು.

ವೈದ್ಯರಾದ ಡಾ.ಎಂ.ಮೇದಾರ, ಡಾ.ರಮೇಶ ಪತ್ತಾರ, ಡಾ.ಆದರ್ಶ ಕೌಜಲಗಿ, ಡಾ.ರೇವಣೆಶ ಮಾರಾಪೂರ, ಪಟ್ಟಣದ ಔಷಧ ವ್ಯಾಪಾರಸ್ಥರಾದ ಮಹಾಂತೇಶ ತಿರಕನ್ನವರ, ಶ್ರೀಶೈಲ ಹಿಪ್ಪರಗಿ, ಅನೀಲ ಉಳ್ಳಾಗಡ್ಡಿ, ರಾಜು ಬಡಿಗೇರ, ಪ್ರಕಾಶ ಹೊಸೂರ, ಬಸವರಾಜ ಶಿರೋಳ, ರಾಜಕುಮಾರ ಬಿದರಿ, ಪ್ರಭು ಬ್ಯಾಳಿ, ರಾಜು ನಂದೆಪ್ಪನವರ, ಬಸವರಾಜ ಸಂಗಾನಟ್ಟಿ, ಸಿದ್ದು ಕೊಣ್ಣೂರ, ಬಸವರಾಜ ಕೊಣ್ಣೂರಮಠ ಸೇರಿದಂತೆ ಹಲವರು ಇದ್ದರು.

ರವಿವಾರ, ಸೋಮವಾರ ಎರಡು ದಿನಗಳ ಕಾಲ ಶ್ರೀಶೈಲಕ್ಕೆ ತೆರಳುವ ಪಾದಯಾತ್ರಿಕರಿಗೆ ಉಚಿತವಾಗಿ ಔಷಧ ವಿತರಣೆಗೆ ವಿಜಯಪುರದ ಶ್ವೇತಾ, ಜಮಖಂಡಿಯ ಸತ್ವರ್ಷಿ ಮತ್ತು ಪದ್ಮಾ, ಬನಟ್ಟಿಯ ರಾಟಿ ಫಾರ್ಮಾಗಳ ಮಾಲೀಕರು ಸಹಕಾರ ನೀಡಿದ್ದಾರೆ.

# ತೇರದಾಳದಿಂದ ಶ್ರೀಶೈಲಕ್ಕೆ ಪಾದಯಾತ್ರೆ ಗಿರಿಗಿರಿ ಮಲ್ಲಯ್ಯ ಪರ್ವತ ಮಲ್ಲಯ್ಯ ಘೇ...



**ತೇರದಾಳ :** ಯುಗಾದಿ ಹಬ್ಬದಂದು ಜರುಗವ ಆಂಧ್ರಪ್ರದೇಶದ ಶ್ರೀಶೈಲ ಮಲ್ಲಿಕಾರ್ಜುನ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಪ್ರತಿ ವರ್ಷದಂತೆ ಈ ವರ್ಷವು ಹೋಳಿ ಹುಣ್ಣಿಮೆಯ ದಿನ ಭಾನುವಾರ ಪಟ್ಟಣದಿಂದ ಸಾವಿರಾರು ಭಕ್ತಾಧಿಗಳು ಪಾದಯಾತ್ರೆ ಕೈಗೊಂಡರು. ಕ್ಷೇತ್ರಾಧಿಪತಿ ಅಲ್ಲಮಪ್ರಭುದೇವರ ದೇವಸ್ಥಾನದಲ್ಲಿ ಮಲ್ಲಯ್ಯನ ಕಂಬಿಗೆ ಸಾಮೂಹಿಕವಾಗಿ ಮಂಗಳಾರುತಿ ನಡೆಸಿದ ಭಕ್ತಾಧಿಗಳು, ಮಂಗಳಾರುತಿ ಮುಗಿದ ಬಳಿಕ ಪಾದಯಾತ್ರೆ ಪ್ರಾರಂಭಿಸಿದರು. ನೆತ್ತಿ ಸುಡುವ ಬಿಸಿಲಿನಲ್ಲಿ ಬರಗಾಲದಲ್ಲಿ ಮಂಗಳಾರುತಿ ಮುಗಿಯುವ ವರೆಗೆ ನಿಂತ ಭಕ್ತಾಧಿಗಳು ಭಕ್ತಿಯ ಪರಾಕಷ್ಠೆಗೆ ಸಾಕ್ಷಿಯಾದರು. ಇನ್ನೂ ಪಾದಯಾತ್ರೆಗೆ ತೆರಳು ಯಾತ್ರಿಕರಿಗೆ ಭಕ್ತರು ನಮಸ್ಕರಿಸಿ ಶುಭ ಹಾರೈರಿಸಿದರು. ಪ್ರಭುದೇವರ ದೇವಸ್ಥಾನದಿಂದ ಹಿಡಿದು ರಬಕವಿ ವರೆಗಿನ ಏಳು ಕಿಮೀ ವರೆಗೆ ನಿರಂತರವಾಗಿ ಅಲ್ಲಲ್ಲಿ ಸೇವಕರು ದ್ರಾಕ್ಷಿ, ಕಲ್ಲಂಗಡಿ, ಬಾಳೆಹಣ್ಣು, ಲಿಂಬು ಶರಬತ್ ಅಂಬಲಿ, ಬಿಸ್ಲರಿ ನೀರಿನ ಬಾಟಲಿ, ಅಲ್ಪೋಪಹಾರದ ವ್ಯವಸ್ಥೆ ಮಾಡಿದ್ದರು. ಸಸಾಲಟ್ಟಿ, ಕಾಲತಿಪ್ಪಿ, ಗೋಲಭಾವಿ ಸೇರಿದಂತೆ ಬೇರೆ ಬೇರೆ ಹಳ್ಳಿಗಳ ಭಕ್ತಾಧಿಗಳು ತೇರದಾಳ ಮೂಲಕವೇ ಮಲ್ಲಯ್ಯನ ಕಂಬಿಯೊಂದಿಗೆ ಪಾದಯಾತ್ರೆ ನಡೆಸಿದರು. ಕೆಲವರು ಹತ್ತು ದಿನಗಳಲ್ಲಿ ಶ್ರೀಶೈಲ ತಲುಪಿದರೆ ಕೆಲವರು ಅಮವಾಶ್ಯೆ ಮುನ್ನಾದಿನ ತಲಪುತ್ತಾರೆ. ಬನಹಟ್ಟಿ ನಾವಲಗಿಯ ವರೆಗೆ ನೂರಾರು ಭಕ್ತಾಧಿಗಳು ಯಾತ್ರಿಕರನ್ನು ಬೀಳ್ಕೊಟ್ಟು ಬಂದರು.

# ನಿರ್ಮೋಹ, ವೈರಾಗ್ಯ ದುಃಖಕ್ಕೆ ದಿವ್ಯೌಷಧ: ಜ್ಞಾನಮಯಾನಂದ ಶ್ರೀ



**ಜಮಖಂಡಿ :** ಸಂಪತ್ತು, ಅಧಿಕಾರ, ಸ್ಥಾನಮಾನ ಎಲ್ಲವೂ ಸಮೃದ್ಧವಾಗಿದ್ದರೂ ಆಸೆ, ಮೋಹ, ಬಯಕೆಗಳು ಸಂಸಾರದಲ್ಲಿನ ದುಃಖಕ್ಕೆ ಕಾರಣಗಳಾಗಿವೆ. ಸಾಕೆಂಬ ಭಾವ, ಸಂತೃಪ್ತಿ ಭಾವ, ನಿರ್ಮೋಹ ಹಾಗೂ ವೈರಾಗ್ಯ ಎಲ್ಲ ದುಃಖಗಳ ನಿವಾರಣೆಗೆ ದಿವ್ಯೌಷಧಗಳಾಗಿವೆ ಎಂದು ಅಮಲಝರಿಯ ಶ್ರದ್ಧಾನಂದ ಆಶ್ರಮದ ಜ್ಞಾನಮಯಾನಂದ ಮಹಾಸ್ವಾಮಿಗಳು ಹೇಳಿದರು.

ತಾಲ್ಲೂಕಿನ ಹುಲ್ಯಾಳ ಗ್ರಾಮದ ಶ್ರೀಗುರುದೇವಾಶ್ರಮದಲ್ಲಿ ಶ್ರೀಗುರುದೇವ ಸತ್ಸಂಗ ಬಳಗದ ಆಶ್ರಯದಲ್ಲಿ ತಿಂಗಳ ನಾಲ್ಕನೇ ಭಾನುವಾರದ ಸಂಜೆ ನಡೆದ ಶ್ರೀಗುರುದೇವ ಸತ್ಸಂಗ ಮಾಸಿಕ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ 'ಸಂಸಾರದಲ್ಲಿ ಸುಖಿಯಾಗಿರುವುದು ಹೇಗೆ?' ಎಂಬ ವಿಷಯ ಕುರಿತು ಆಶೀರ್ವಚನ ನೀಡಿದರು.

ಒಳ್ಳೆಯವರು- ಕೆಟ್ಟವರು ಇರುತ್ತಾರೆ. ಬೆಳಕು-ಕತ್ತಲೆ ಇರುತ್ತವೆ. ಪಾಂಡವರು-ಕೌರವರು ಇರುತ್ತಾರೆ. ಈ ಜಗತ್ತು ಒಳ್ಳೆಯ ಹಾಗೂ ಕೆಟ್ಟದರ ಸಮ್ಮಿಶ್ರಣವಾಗಿದೆ. ಒಳ್ಳೆಯದು ಹಾಗೂ ಕೆಟ್ಟದ್ದು ಎರಡೂ ಕ್ಷಣಿಕ ಎಂದು ಭಾವಿಸಿದರೆ ಸಂಸಾರದಲ್ಲಿ ಸುಖ ಪ್ರಾಪ್ತಿಯಾಗುತ್ತದೆ.

ಮುಗಿದ ಕೈ, ಬಾಗಿದ ತಲೆ, ಎನಗಿಂತ ಕಿರಿಯರಿಲ್ಲ ಎಂಬ ಬಸವ ಭಾವ ತಾಳಿದರೆ ಸುಖ ಸಿಗುತ್ತದೆ ಎಂದರು.

ಸಿದ್ದಾಪುರದ ಅಡವಿ ಆಶ್ರಮದ ಮಾತೋಶ್ರೀ ಮಹಾದೇವಿ ತಾಯಿ ಸಾನ್ನಿಧ್ಯ ವಹಿಸಿ ಮಾತನಾಡಿ, ಸಂಸಾರ ಸಸಾರ ಆಗಬೇಕಾದರೆ ಸತ್ಸಂಗದಲ್ಲಿರಬೇಕು. ಕೈಯಲ್ಲಿ ಕಾಯಕ, ಮನದಲ್ಲಿ ಪರಮಾತ್ಮನ ನಾಮಸ್ಮರಣೆ ಇದ್ದರೆ ಸಂಸಾರದಲ್ಲಿಕೊಂಡು ಸುಖ, ಸಂತೋಷ ಹಾಗೂ ನೆಮ್ಮದಿ ಪಡೆಯಲು ಸಾಧ್ಯ ಎಂದು ಆಶೀರ್ವಚನ ನೀಡಿದರು.

ಹುಲ್ಯಾಳ ಗುರುದೇವಾಶ್ರಮದ ಹರ್ಷಾನಂದ ಮಹಾಸ್ವಾಮಿಗಳು ನೇತೃತ್ವ ವಹಿಸಿ ಮಾತನಾಡಿ, ಸಂಸಾರದಲ್ಲಿ ದುಃಖ ಉಂಟಾದಾಗ 'ಓಂಕಾರ' ಧ್ಯಾನ ಮಾಡಿದರೆ ದುಃಖ ಮಾಯವಾಗಿ ಸುಖ ಪ್ರಾಪ್ರಿಯಾಗುತ್ತದೆ ಎಂದು ಆಶಿರ್ವಚನ ನೀಡಿದರು.

ಶ್ರೀಗುರುದೇವ ಸತ್ಸಂಗಕ್ಕೆ ಮಹಾಪ್ರಸಾದದ ವ್ಯವಸ್ಥೆ ಕಲ್ಪಿಸಿದ ರತ್ನಯ್ಯ ಮಠಪತಿ ದಂಪತಿಯನ್ನು ಹಾಗೂ ಜಾನಪದ ಕಲಾವಿದೆ ಶಿವನವ್ವ ಬಾವಿಕಟ್ಟಿ ಅವರನ್ನು ಶ್ರೀಗುರುದೇವಾಶ್ರಮದ ಪರವಾಗಿ ಗೌರವಿಸಲಾಯಿತು.

ಪುಂಡಲೀಕ ಭಜಂತ್ರಿ ಕ್ಲ್ಯಾರಿನೆಟ್ ನುಡಿಸಿದರು. ಪರಮೇಶ್ವರ ತೇಲಿ ತಬಲಾ ಸಾಥ್ ನೀಡಿದರು. ಗುರುಬಸುಗೌಡ ಪಾಟೀಲ, ರಾಮಚಂದ್ರ ಹೂಗಾರ(ತಬಲಾ), ಶಿವಾನಂದ ಬಾಡನವರ(ಹಾರ್ಮೋನಿಯಂ) ಸಂಗೀತ ಸೇವೆ ನೀಡಿದರು. ನಿವೃತ್ತ ಮುಖ್ಯ ಶಿಕ್ಷಕ ಎಂ.ಡಿ. ಸಂಖ ಸ್ವಾಗತಿಸಿದರು. ಮಲ್ಲೇಶ ಗೆದ್ದೆಪ್ಪನವರ ನಿರೂಪಿಸಿದರು.

# ಎರಡನೇ ಬಾರಿ ನನ್ನ ಆಯ್ಕೆ ನಿಶ್ಚಿತ ಅಣ್ಣಾಸಾಹೇಬ ಜೊಲ್ಲೆ ವಿಶ್ವಾಸ

**ಅಥಣಿ ::** ಚಿಕ್ಕೋಡಿ ಲೋಕಸಭಾ ಕ್ಷೇತ್ರದಲ್ಲಿ ನನ್ನ ಅಧಿಕಾರಾವಧಿಯಲ್ಲಿ ಅನುಷ್ಠಾನ ಗೊಳಿಸಿದ ಜನಪರ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಮೆಚ್ಚಿ ಮತದಾರ ಬಾಂಧವರು ಎರಡನೇ ಬಾರಿ ನನ್ನ ಆಯ್ಕೆಗೆ ನಿಶ್ಚಿತವಾಗಿಯೂ ಸಹಕರಿಸುತ್ತಾರೆ ಎಂದು ಲೋಕಸಭಾ ಬಿಜೆಪಿ ಅಭ್ಯರ್ಥಿ ಅಣ್ಣಾಸಾಹೇಬ ಜೊಲ್ಲೆ ವಿಶ್ವಾಸ ವ್ಯಕ್ತ ಪಡಿಸಿದರು.



ಅವರು ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿದ್ದರು. ಕಳೆದ ಬಾರಿ ನಾನು ಮೊದಲ ಬಾರಿಗೆ ಸಂಸದನಾಗಿ ಆಯ್ಕೆಯಾದಾಗ ಇಡೀ ಚಿಕ್ಕೋಡಿ ಲೋಕಸಭಾ ಕ್ಷೇತ್ರದಲ್ಲಿ ಅಥಣಿ ಮತಕ್ಷೇತ್ರದಿಂದಲೇ ಅತೀ ಹೆಚ್ಚು ಮತಗಳನ್ನು ಪಡೆದುಕೊಂಡಿದ್ದು, ಈ ಬಾರಿಯೂ ಸಹ ಅಥಣಿ ಮತಕ್ಷೇತ್ರದ ಮತದಾರರು ನನ್ನ ಕೈ ಹಿಡಿಯುತ್ತಾರೆ ಎಂದು ವಿಶ್ವಾಸ ವ್ಯಕ್ತ ಪಡಿಸಿದರು.

ಸಂಸದನಾಗಿ ಐದು ವರ್ಷಗಳ ಅವಧಿಯಲ್ಲಿ ಅರ್ಧಕ್ಕಿಂತ ಹೆಚ್ಚು ಅವಧಿ ಕರೋನಾ ಮತ್ತು ಪ್ರವಾಹದಂತಹ ಸಮಸ್ಯೆಗೆ ಮೀಸಲಿಡಬೇಕಾಯಿತು. ಇನ್ನುಳಿದ ಅವಧಿಯಲ್ಲಿ ಅಥಣಿ ಮತಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಅನುದಾನ ವಿನಿಯೋಗಿಸಿರುವೆ ಎಂದ ಅವರು ಅಥಣಿ ಕ್ಷೇತ್ರದಲ್ಲಿ ಪಿ.ಎಮ್.ಜಿ.ಎಸ್.ವೈ ಯೋಜನೆಯಡಿ 25 ಕೋಟಿ ಅನುದಾನದಲ್ಲಿ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗಾಗಿ, ಲೋಕೋಪಯೋಗಿ ಇಲಾಖೆ ಮೂಲಕ ರಸ್ತೆ ನಿರ್ಮಾಣಕ್ಕೆ ಅನುದಾನ ಸೇರಿದಂತೆ ಸಂಸದ ನಿಧಿಯಲ್ಲಿ 2 ಕೋಟಿ 97 ಲಕ್ಷ ರೂ. ಅನುದಾನದಲ್ಲಿ ಅಂಬ್ಯುಲೆನ್ಸ, ಸಿಸಿ ಕ್ಯಾಮರಾ ಅಳವಡಿಕೆ, ಬಸ್ ಶೆಲ್ಟರ್, ಸಮುದಾಯ ಭವನಗಳನ್ನು ನಿರ್ಮಾಣಗೊಳಿಸಲಾಗಿದೆ ಎಂದರು.

ಅಥಣಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿಗಾಗಿ 4480 ಕೋಟಿ ಅನುದಾನ ಮಂಜೂರು ಮಾಡಿಸಿರುವೆ ಅಲ್ಲದೆ ಕೆ.ಎನ್.ಎನ್ ಮೂಲಕ ಝುಂಜರವಾಡದಲ್ಲಿ 1 ಕೋಟಿ ಅನುದಾನದಲ್ಲಿ ರಸ್ತೆ ಕಾಮಗಾರಿ ಕೈ ಗೊಂಡಿರುವೆ ಎಂದ ಅವರು ನನ್ನ ಧರ್ಮ ಪತ್ನಿ ಶಶಿಕಲಾ ಜೊಲ್ಲೆಯವರು ರಾಜ್ಯ ಸರಕಾರದಲ್ಲಿ ಮುಜರಾಯಿ ಖಾತೆ ಸಚಿವರಾಗಿ ಕಾರ್ಯನಿರ್ವಹಿಸಿದ ಸಂದರ್ಭದಲ್ಲಿ ಅಥಣಿ ಕ್ಷೇತ್ರದ ದೇವಸ್ಥಾನಗಳ ಅಭಿವೃದ್ಧಿಗೆ ಅನುದಾನ ಬಿಡುಗಡೆಯಾಗಿದೆ ಎಂದರು.

ಎಂದ ಅವರು 10 ವರ್ಷಗಳ ಅವರ ಅವಧಿಯಲ್ಲಿ 500 ವರ್ಷಗಳಿಂದ ಸಾಧ್ಯವಾಗದ ರಾಮ ಮಂದಿರದ ನಿರ್ಮಾಣ, 75 ವರ್ಷಗಳಿಂದ ಸಾಧ್ಯವಾಗದ ಅನುಚ್ಛೇದ 370 ಕಲಂ ರದ್ದತಿ ಸೇರಿದಂತೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪ ಸಂಖ್ಯಾತ, ರೈತ, ಬಡ, ನಿರ್ಗತಿಕರ, ವಿದ್ಯಾರ್ಥಿಗಳ, ಮಹಿಳೆಯರ, ಕಾರ್ಮಿಕರು ಸೇರಿದಂತೆ ಎಲ್ಲ ವರ್ಗದವರ ಅನಕೂಲಕ್ಕಾಗಿ ಯೋಜನೆಗಳನ್ನು ಜಾರಿಗೊಳಿಸಿದ ಕೀರ್ತಿ ನರೇಂದ್ರ ಮೋದಿಯವರಿಗೆ ಸಲ್ಲುತ್ತಿದ್ದು, ಈ ಬಾರಿಯೂ ದೇಶದಲ್ಲಿ 400 ಸ್ಥಾನಗಳಲ್ಲಿ ಜಯ ಗಳಿಸುವ ಮೂಲಕ ಮತ್ತೊಮ್ಮೆ ಪ್ರಧಾನಿಯಾಗುವುದು ನಿಶ್ಚಿತ ಎಂದರು.

ಚಿಕ್ಕೋಡಿ ಲೋಕಸಭಾ ಕ್ಷೇತ್ರದ ವ್ಯಾಪ್ತಿಯ ಎಲ್ಲ ವಿಧಾನ ಸಭಾ ಕ್ಷೇತ್ರಗಳ ಪ್ರಮುಖರಿಗೆ, ಮಠಾಧೀಶರಿಗೆ, ಪಕ್ಷದ ಕಾರ್ಯಕರ್ತರಿಗೆ, ಮುಖಂಡರಿಗೆ ಭೇಟಿ ಮಾಡಿ ಚರ್ಚಿಸಿದ ನಂತರ ಎರಡನೇ ಅವಧಿಯಲ್ಲಿ ಜಿಲ್ಲಾ ಪಂಚಾಯತ ಕ್ಷೇತ್ರದಲ್ಲಿಯೂ ಮನೆ ಮನೆ ಭೇಟಿ ಮಾಡಿ ಚರ್ಚಿಸುವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಧುರೀಣ–ರಾದ ಅಪ್ಪಾಸಾಹೇಬ ಅವತಾಡೆ, ರಮೇಶ ಪಾಟೀಲ, ಗಿರೀಶ ಬುಟಾಳಿ, ಬಾಳಾಸಾಹೇಬ ಪಾಟೀಲ, ಮಲ್ಲಪ್ಪ ಹಂಚಿನಾಳ, ಅಣ್ಣಾಸಾಹೇಬ ನಾಯಿಕ, ಸಂತೋಷ ಕಕಮರಿ, ಅಣ್ಣಪ್ಪಾ ಹಳ್ಳೂರ, ಸದಾಶಿವ ಕೊಂಪಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಬರ ನಿರ್ವಹಣೆ ಮತ್ತು ಕುಡಿಯುವ ನೀರು ಪೂರೈಕೆ ಪ್ರಗತಿ ಪರಿಶೀಲನಾ ಸಭೆ
## ಕುಡಿಯುವ ನೀರು ಪೂರೈಕೆಗೆ ಮೊದಲ ಆದ್ಯತೆ ನೀಡಿ: ಡಿಸಿ ನಲಿನ್ ಅತುಲ್



**ಕೊಪ್ಪಳ :** ಜಿಲ್ಲೆಯ ಯಾವುದೇ ಗ್ರಾಮದಲ್ಲಿ ಕುಡಿಯುವ ನೀರಿನ ವ್ಯತ್ಯಯವಾಗಬಾರದು. ಸಮಸ್ಯಾತ್ಮಕ ಗ್ರಾಮಗಳಲ್ಲಿ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳೊಂದಿಗೆ ಕುಡಿಯುವ ನೀರು ಪೂರೈಸಲು ಮೊದಲ ಆದ್ಯತೆ ನೀಡಿ ಎಂದು ಜಿಲ್ಲಾಧಿಕಾರಿ ನಲಿನ್ ಅತುಲ್ ಅವರು ಅಧಿಕಾರಿಗಳಿಗೆ ತಿಳಿಸಿದರು.

ಶುಕ್ರವಾರದಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬರ ನಿರ್ವಹಣೆ ಮತ್ತು ಕುಡಿಯುವ ನೀರು ಪೂರೈಕೆ ಕುರಿತ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಗ್ರಾಮ ಹಾಗೂ ನಗರ ಪ್ರದೇಶಗಳಲ್ಲಿ ಸರ್ಕಾರಿ ಬೋರ್‌ವೆಲ್‌ಗಳಿಂದ ಕುಡಿಯುವ ನೀರು ಸರಬರಾಜು ಮಾಡಬೇಕು. ಒಂದು ವೇಳೆ ಸರ್ಕಾರಿ ಬೋರ್‌ವೆಲ್‌ಗಳಲ್ಲಿ ಇಳುವರಿ ಕಡಿಮೆಯಾಗಿದ್ದಲ್ಲಿ ಖಾಸಗಿ ಬೋರ್‌ವೆಲ್‌ಗಳೊಂದಿಗೆ ಒಪ್ಪಂದ ಮಾಡಿಕೊಂಡು ನೀರು ಸರಬರಾಜು ಮಾಡಬೇಕು. ಜೂನ್ 30 ರವರೆಗೂ ಕುಡಿಯುವ ನೀರಿನ ತೊಂದರೆ ಬರದಂತೆ ಎಚ್ಚರಿಕೆ ಕ್ರಮ ವಹಿಸಬೇಕು. ಅಗತ್ಯ ಪರಿಸ್ಥಿತಿಗಳಲ್ಲಿ ಹೊಸ ಬೋರ್‌ವೆಲ್‌ಗಳನ್ನು ಕೊರೆಸಿ ನೀರು ಪೂರೈಕೆಗೆ ಅವಕಾಶವಿದ್ದು, ಸ್ಥಳೀಯ ಜನಸಂಖ್ಯೆಗೆ ಅನುಗುಣವಾಗಿ ಬೇಡಿಕೆ ಅನುಸಾರ ನೀರು ಸರಬರಾಜು ಮಾಡಲು ಕ್ರಮ ಕೈಗೊಳ್ಳಿ. ಕುಡಿಯುವ ನೀರು ಪೂರೈಕೆ ಮೊದಲ ಆದ್ಯತೆ ಆಗಬೇಕು ಎಂದು ಪಿಡಿಒಗಳಿಗೆ ತಿಳಿಸಿದರು.

ಗ್ರಾಮ ಪಂಚಾಐತಿ ಅಭಿವೃದ್ಧಿ ಅಧಿಕಾರಿಗಳಿಗೆ ಟೆ–ಂಡರ್ ಕೀ ನೀಡಲಾಗಿದೆ. ಅದನ್ನು ಬಳಸಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ಟ್ಯಾಂಕರ್‌ಗಳಿಗೆ ಟೆಂಡರ್ ಆಹ್ವಾನಿಸಿ. ನಿಗದಿಪಡಿಸಿದ ಸಾಮಾನ್ಯ ದರದ ಅನ್ವಯ ಗ್ರಾಮದ ಬೇಡಿಕೆಗೆ ಅನುಗುಣವಾಗಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಿ. ಟ್ಯಾಂಕರ್ ಮೂಲಕ ಸರಬರಾಜು ಆಗುವ ನೀರಿನ ಮೂಲದ ಬಗ್ಗೆಯೂ ಅಧಿಕಾರಿಗಳಿಗೆ ಮಾಹಿತಿ ಇರಬೇಕು. ಯಾವುದೇ ಖಾಸಗಿ ಬೋರ್‌ವೆಲ್‌ನಿಂದ ಟ್ಯಾಂಕರ್‌ಗಳು ನೀರು ಪಡೆಯುತ್ತಿದ್ದರೆ ಪ್ರತಿ ಗ್ರಾಮ ಪಂಚಾಯತಿಗೆ ನೀಡಲಾದ ನೀರು ಪರೀಕ್ಷಾ ಕಿಟ್‌ಗಳನ್ನು ಬಳಸಿ ಟ್ಯಾಂಕರ್‌ನ ಪ್ರತಿ ಟ್ರಿಪ್ ನೀರು ಸರಬರಾಜು ಆಗುವ ಮುನ್ನ ಪರೀಕ್ಷೆಗೊಳಪಡಿಸಿ, ಕುಡಿಯಲು ಯೋಗ್ಯ ಎಂದು ತೀರ್ಮಾನಿಸಿದ ಮೇಲೆ ನೀರು ಸರಬರಾಜು ಮಾಡಿ. ಕಲುಷಿತ ನೀರು ಸರಬರಾಜು ಆದಲ್ಲಿ ಸಂಬಂಧಿಸಿದ ಪಿಡಿಒಗಳು ನೇರ ಹೊಣೆಗಾರರಾಗಿರುತ್ತಾರೆ ಎಂದು ಜಿಲ್ಲಾಧಿಕಾರಿಗಳು ಎಚ್ಚರಿಕೆ ನೀಡಿದರು.

ನಗರ ಪ್ರದೇಶಗಳಲ್ಲಿ ನೀರಿನ ಆಕರಗಳ ಸಂಗ್ರಹಣೆ ಸಾಮರ್ಥ್ಯ, ಪರ್ಯಾಯ ನೀರಿನ ಮೂಲಗಳನ್ನು ಬಳಸಿಕೊಂಡು ಯೋಜನೆ ರೂಪಿಸಿ, ಇನ್ನೂ 3 ತಿಂಗಳುಗಳ ಕಾಲ ನೀರು ಪೂರೈಕೆಗೆ ಸಮಸ್ಯೆಯಾಗದಂತೆ ಎಚ್ಚರಿಕೆ ವಹಿಸಿ. ತುಂಗಭದ್ರಾ ನದಿ ನೀರನ್ನು ಕುಡಿಯುವ ಉದ್ದೇಶಕ್ಕೆ ಮಾತ್ರ ಬಳಸುವಂತೆ ನಿರ್ದೇಶನವಿದ್ದು, ಇದನ್ನು ಯಾರೂ ಮೀರಬಾರದು, ಕುಡಿಯುವ ನೀರಿನ ಹೊರತಾಗಿ ಬೇರೆ ಉದ್ದೇಶಕ್ಕೆ ನದಿ ನೀರನ್ನು ಬಳಸುವುದು ಕಂಡುಬಂದಲ್ಲಿ ವಿಪತ್ತು ನಿರ್ವಹಣಾ ಪ್ರಾಧಿಕಾರದ ಕಾಯ್ದೆಯನ್ವಯ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುತ್ತದೆ. ಹಾಗೂ ಕುಡಿಯುವ ನೀರಿನ ಸಮಸ್ಯೆಯ ದೂರು ದಾಖಲಿಸಲು ಎಲ್ಲ ನಗರ ಸ್ಥಳೀಯ ಸಂಸ್ಥೆಗಳ ಕಚೇರಿಯಲ್ಲಿ ಸಹಾಯವಾಣಿಯನ್ನು ತೆರೆಯಲಾಗಿದ್ದು, ದಾಖಲಾಗುವ ದೂರುಗಳನ್ನು ವಹಿಯಲ್ಲಿ ದಾಖಲಿಸಿಕೊಂಡು, ಕೂಡಲೇ ಕ್ರಮ ವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲೆಯಲ್ಲಿ ಹೋಬಳಿವಾರು ಜಾನುವಾರು, ಕುರಿ ಮೇಕೆಗಳ ಸಂಖ್ಯೆಯ ಮಾಹಿತಿಯನ್ನು ಪಶು ಸಖಿ ಅವರಿಂದ ಪಡೆದು, ಜಿಲ್ಲೆಯಲ್ಲಿ ಸದ್ಯಕ್ಕೆ ಇರುವ ಮೇವು ದಾಸ್ತಾನು ಹಾಗೂ ಮುಂದಿನ ದಿನಗಳಲ್ಲಿ ಬರಬಹುದಾದ ಬೇಡಿಕೆಯ ವರದಿಯನ್ನು ಸಿದ್ಧಪಡಿಸಿ. ಪ್ರತಿ ವಾರ ಪಶು ಸಖಿ ಅವರಿಂದ ನಿಖರ ಮಾಹಿತಿ ಪಡೆದು ಮೇವು ದಾಸ್ತಾನು ಪರಿಶೀಲಿಸಿ. ಅಗತ್ಯವಿದ್ದಲ್ಲಿ ಮೇವು ಖರೀದಿಗೆ ಕ್ರಮ ಕೈಗೊಳ್ಳಲಾಗುತ್ತದೆ. ರೈತರಿಗೆ ಮೇವು ಕಿಟ್‌ಗಳನ್ನು ವಿತರಿಸಲು ಕ್ರಮ ಕೈಗೊಳ್ಳಿ. ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಸಂದರ್ಭದಲ್ಲಿ ಜನಸಂಖ್ಯೆ ಮಾತ್ರವಲ್ಲದೆ, ಗ್ರಾಮದ ಜಾನುವಾರು, ಕುರಿ ಮೇಕೆಗಳಿಗೆ ಬೇಕಾಗುವ ನೀರಿನ ಪ್ರಮಾಣವನ್ನು ಆಧರಿಸಿ ನೀರು ಸರಬರಾಜು ಮಾಡಬೇಕು ಎಂದು ಸಂಬಂಧಿಸಿದ ಇಲಾಖಾ ಅಧಿಕಾರಿಗಳಿಗೆ ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೆಯ, ಸಹಾಯಕ ಆಯುಕ್ತರಾದ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ, ಜಿಲ್ಲಾ ಪಂಚಾಯತಿಯ ಮುಖ್ಯ ಯೋಜನಾಧಿಕಾರಿ ಡಿ.ಮಂಜುನಾಥ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ರೇಷ್ಮಾ ಹಾನಗಲ್, ಜಂಟಿ ಕೃಷಿ ನಿರ್ದೇಶಕರಾದ ರುದ್ರೇಶಪ್ಪ ಟಿ. ಸೇರಿದಂತೆ ಎಲ್ಲ ತಾಲ್ಲೂಕುಗಳ ತಹಶೀಲ್ದಾರರು, ತಾ.ಪಂ. ಕಾರ್ಯನಿರ್ವಹಣಾಧಿಕಾರಿಗಳು, ಮುಖ್ಯಾಧಿಕಾರಿಗಳು, ಪಿಡಿಒಗಳು, ಉಪಸ್ಥಿತರಿದ್ದರು.

# ಗ್ಯಾರಂಟಿ ಯೋಜನೆಗಳು ಸಮರ್ಥವಾಗಿ ನಡೆಯುತ್ತಿವೆ: ಜ್ಯೋತಿ

**ಕೊಪ್ಪಳ :** ಬಿಜೆಪಿ ಅವರು ಕಾಂಗ್ರೆಸ್ ಸರಕಾರದ ಮೇಲೆ ಸುಳ್ಳುಗೂಭೆ ಕೂಡಿಸುವ ಪ್ರಯತ್ನ ಮಾಡುತ್ತಿದ್ದಾರೆ,ರಾಜ್ಯದಕಾನೂನು ಅತ್ಯಂತ ಸುವ್ಯವಸ್ಥಿತವಾಗಿದೆ ಎಂದು ಜಿಲ್ಲಾ ಮಹಿಳಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ, ಗ್ಯಾರಂಟಿ ಪ್ರಾಧಿಕಾರ ಸದಸ್ಯೆ ಜ್ಯೋತಿ ಎಂ. ಗೊಂಡಬಾಳ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಬಿಜೆಪಿಯ ವಿಪ ಸದಸ್ಯೆ ಹೇಮಲತಾ ನಾಯಕ ಮಾಧ್ಯಮಗೋಷ್ಠಿ ನಡೆಸಿ ಸುಳ್ಳುಗಳನ್ನು ಉದುರಿಸಿದ್ದಾರೆ, ಬಿಜೆಪಿ ಅಂತಹ ಸುಳ್ಳುಗಳಿಂದಲೇ ಹತ್ತು ವರ್ಷ ಜನರನ್ನು ಮೂರ್ಖರನ್ನಾಗಿ ಮಾಡಿದ್ದು ಈಗ ಅವು ನಡೆಯಲ್ಲ ಎಂದು ಟಾಂಗ್ ನೀಡಿದ್ದಾರೆ.

ಪದೇ ಪದೇ ಗ್ಯಾರಂಟಿಗಳ ಆಸರೆಯಿಂದ ಕಾಂಗ್ರೆಸ್ ಅಧಿಕಾರಕ್ಕೇರಿದೆ ಎನ್ನುತ್ತಾ ಬಿಜೆಪಿ ತನ್ನ ಅವಧಿಯ ಬ್ರಹ್ಮಾಂಡ ಭ್ರಷ್ಟಾಚಾರಗಳನ್ನು ಮುಚ್ಚಿಕೊಳ್ಳುವ ಪ್ರಯತ್ನ ಆರಂಭದಿಂದಲೇ ಮಾಡುತ್ತಿದೆ. ಗ್ಯಾರಂಟಿಗಳನ್ನು ಘೋಷಿಸಿದಂತೆ ಯಥ–ಾವತ್ತಾಗಿ ಜಾರಿ ಮಾಡಲಾಗಿದೆ, ರಾಜ್ಯದ ಜನತೆಗೆ ಕಾಂಗ್ರೆಸ್ ಗ್ಯಾರಂಟಿಗಳ ಬಗ್ಗೆ ವಿಶ್ವಾಸ ಇದೆ, ಅದರ ಲಾಭ ಪಡೆದವರಿಗೆ ಗೊತ್ತಿದೆ, ಬಿಜೆಪಿ ಬೆಂಬಲಿಸಿದ ಮಹಿಳೆಯರು ಸಹ ರಾಜ್ಯ ಕಾಂಗ್ರೆಸ್ ಬೆಂಬಲಿಸುವ ವಿಚಾರ ತಿಳಿದು ಭಯದಿಂದ ಬಿಜೆಪಿ ಮಾತನಾಡುತ್ತಿದೆ, ಸಿದ್ದರಾಮಯ್ಯ ಅವರು ಗ್ಯಾರಂಟಿ ಜೊತೆಗೆ ಈ ವರ್ಷ ಅಭಿವೃದ್ಧಿಯ ದಿಕ್ಸೂಚಿಯನ್ನೇ ನೀಡಿದ್ದಾರೆ, ಮಾಜಿ ತಾ.ಪಂ.ಅಧ್ಯಕ್ಷ ಬಾಲಚಂದ್ರನ್ ಅವರ ನೇತೃತ್ವದ ಗ್ಯಾರಂಟಿ ಸಮಿತಿ ಜನರಿಗೆ ಯೋಜನೆ ತಲುಪಿಸುವ ಕೆಲಸ ಮಾಡುತ್ತಿದೆ, ಕೆಲವೇ ದಿನಗಳಲ್ಲಿ ತಾಂತ್ರಿಕ ಧೀಷದಿಂದ ಯಾ–ರಿಗಾದರೂ ಯೋಜನೆ ತಲುಪದಿದ್ದಲ್ಲಿ ಅವ–ರಿಗೂ ಕೊಡಿಸಲು ಸಮಿತಿ ಆಗಿದೆ ಅಲ್ಲದೇ ಕಾಂಗ್ರೆಸ್ ಒಂದೇ ವರ್ಗದ ಓಲೈಕೆಯಲ್ಲಿ ತೊಡಗಿದೆ ಎಂಬುದು ಕೇವಲ ಬಿಜೆಪಿಯ ಚುನಾವಣೆಯ ಅಜೆಂಡಾ, ಪ್ರಜಾಪ್ರಭುತ್ವದ ಅರ್ಥವೇ ಬಿಜೆಪಿಗೆ ಗೊತ್ತಿಲ್ಲ.

ವಿದಾನಸೌಧದ ಒಳಗೆ ದೇಶದ್ರೋಹಿ ಘೋಷಣೆ ಕೂಗಿದ ವಿಚಾರವನ್ನು ತನಿಖಾ ಸಂಸ್ಥೆಗೆವಹಿಸಿದ್ದು ತಪ್ಪಿತಸ್ಥರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಜರಗಿಸುವ ಭರವಸೆಯನ್ನು ಸಿಎಂ ನೀಡಿದ್ದಾರೆ. ಕಾಂಗ್ರೆಸ್ ಪಕ್ಷ ಘೋಷಿಸಿದ ಗ್ಯಾರಂಟಿಗಳಿಗೆ ರಾಜ್ಯದ ಜನತೆಯ ತೆರಿಗೆ ಹಣವನ್ನು ಕೊಡಬೇಕೆ ಹೊರತು ಮೋದಿ ಕೊಡುತ್ತಾರೆಯೇ ಎಂದು ಪ್ರಶ್ನಿಸಿರುವ ಅವರು ಜಿಎಸ್‌ಟಿ ರಿಟರ್ನ್ಸ್ ಕೊಡಿಸುವ ಧೈರ್ಯ ಇಲ್ಲದವರು ಇಲ್ಲಿ ಮಾತನಾಡುತ್ತಾರೆ, ತಮ್ಮ ಕಾರ್ಯಕರ್ತ–ರಿಗೆ ಬೂಟಿನಲ್ಲಿ ಹೊಡೆಯುವ ಇವರು ಜನಸಾಮಾನ್ಯರನ್ನು ಬಿಡುತ್ತಾರಾ ಎಂದು ಪ್ರಶ್ನಿಸಿದ್ದಾರೆ.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುತ್ತಿರುವ ಒಂದು ವರ್ಷದ ಹಿಂದೆ ಬಿಜೆಪಿ ಸರಕಾರದಲ್ಲಿ ಇದ್ದ ಪೊಲೀಸರೇ ಈಗಲೂ ಇದ್ದಾರೆ, ನಮ್ಮ ರಾಜ್ಯದ ಪೊಲೀಸರನ್ನು ಅವಮಾನಿಸುವ ಕೆಲಸ ಇವರಿಂದ ಆಗಿದೆ, ಗ್ಯಾರಂಟಿಗಳ ಮೂಲಕ ಜನರಿಗೆ ಮೋದಿ ಶಾ ನೀಡಿದ ಬರೆಯನ್ನು ಸ್ವಲ್ಪ ತಗ್ಗಿಸಲು ನೇರವಾಗಿ ಫಲಾನುಭವಿ ಖಾತೆಎ ಡಿಬಿಟಿ ಮೂಲಕ ಸಹಾಯ ಮಾಡುತ್ತಿದ್ದು ಜನಪರ ಆಡಳಿತ ನೀಡಿದೆ, ಗ್ಯಾರಂಟಿಗಳನ್ನು ಪುಗಸಟ್ಟೆ ಯೋಜನೆ ಅನ್ನುವ ಮೂಲಕ ಬಿಜೆಪಿ ಬಡ ಮಧ್ಯಮ ವರ್ಗದ ಜನರನ್ನು ಅಣಕಿಸುತ್ತಿದೆ, ಅವರು ಕಾರ್ಪೋರೇಟ್ ಕಂಪನಿಗಳ ದಾಸರಾಗಿದ್ದು, ಜನಸಾಮಾನ್ಯ–ರಿಗೆ ಸಹಾಯ ಮಾಡಿದರೆ ಸಹಿಸಿಕೊಳ್ಳದ ನೀಚ ಸಂಸ್ಕೃತಿ ಉಳ್ಳವರು ಎಂದು ಕಿಡಿ ಕಾರಿದ್ದಾರೆ. ಕೊಪ್ಪಳ ಶಾಸಕ ಕೆ. ರಾಘವೇಂದ್ರ ಹಿಟ್ನಾಳ ಅವರು ಹನ್ನೊಂದು ವರ್ಷದಲ್ಲಿ ಸಾಕಷ್ಟು ಅಭಿವೃದ್ಧಿ ಮಾಡಿದ್ದಾರೆ, ಅದಕ್ಕೆ ಅವರು ಹ್ಯಾಟ್ರಿಕ್ ಆಗಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

ರಾಜ್ಯದಲ್ಲಿನ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಮುಚ್ಚುತ್ತಿದೆ ಎಂಬ ಗುಳಗಣ್ಣವರ ಹೇಳಿಕೆ ಹಾಸ್ಯಾಸ್ಪದವಾಗಿದೆ, ಅದು ಸ್ಥಳಿಯ ಆಡಳಿತದ ವ್ಯಾಪ್ತಿಗೆ ಬರುವ ಯೋಜನೆಆಗಿದೆ, ಇನ್ನು ಕಕಪ್ರದೇಶಾಭಿವೃದ್ಧಿ ಮಂಡಳಿ ಮೂಲಕ ನೂರಾರು ಅಂತಹ ಘಟಕಗಳನ್ನು ನೀತಿ ಸಂಹಿತೆ ಮುಗಿದ ತಕ್ಷಣ ಜಾರಿ ಮಾಡಲಾಗುತ್ತಿದೆ, ನೀರಿನ ಟ್ಯಾಂಕರ್‌ಗಳು ಖಾಸಗಿ ಜನರು ನಡೆಸುವವರು ಅದು ಸರಕಾರಕ್ಕೆ ಸಂಬಂದವೇ ಇಲ್ಲ.ಜನರ ದಿಕ್ಕು ತಪ್ಪಿಸುವ ಹೇಳಿಕೆ ಕೊಡುವದನ್ನು ಬಿಟ್ಟು ಜನರಿಗೆ ಒಳ್ಳೆಯದನ್ನು ಮಾಡಿದಾಗ ಬೆಂಬಲಿಸಿ ಪ್ರಜಾಪ್ರಭುತ್ವದ ಮಹತ್ವ ಉಳಿಸಿ ಎಂದು ಜ್ಯೋತಿ ಗೊಂಡಬಾಳ ಕುಟುಕಿದ್ದಾರೆ.

# ಲಕ್ಕವ್ವದೇವಿ ವಾರ ಹಿಡಿಯುವ ಕಾರ್ಯಕ್ಕೆ ಚಾಲನೆ

**ರಬಕವಿ–ಬನಹಟ್ಟಿ :** ಬನಹಟ್ಟಿಯಲ್ಲಿ ಮಂಗಳವಾರದಂದು ಲಕ್ಕವ್ವದೇವಿಗೆ ಪೂಜೆ ನಡೆಸಿ ಪ್ರತಿ ಮಂಗಳವಾರ ಹಾಗು ಶುಕ್ರವಾರದಂದು ಐದು ವಾರ ಹಿಡಿಯುವ ಕಾರ್ಯದ ಸಲುವಾಗಿ ಇಂದು ಕಾಯಿ ಒಡೆಯಲಾಯಿತು.



ನಗರದ ಗೌಡರು ಮತ್ತು ರೈತರ ದೈವ ಮಂಡಳಿ, ಸೋಮವಾರ ಪೇಟೆ ಸಮಸ್ತ ದೈವ ಮಂಡಳಿ ಹಾಗು ಮಂಗಳವಾರ ಪೇಟೆ ದೈವ ಮಂಡಳಿಯ ಸಮ್ಮುಖದಲ್ಲಿ ನಡೆದ ಕಾರ್ಯದಲ್ಲಿ ಸಿದ್ದನಗೌಡ ಪಾಟೀಲ ಮಾತನಾಡಿ, ಮಾರ್ಚ್ 29 ರಿಂದ 12 ರವರೆಗೆ ವಾರ ಹಿಡಿಯುವ ಕಾರ್ಯ ನಡೆಯುತ್ತಿದ್ದು, ನಗರದಲ್ಲಿ ಯಾವದೇ ಶುಭ ಕಾರ್ಯಗಳನ್ನು ನಡೆಸದಿರುವ ವಾಡಿಕೆಯೂ ಇದೆ. ಅದರಂತೆ ಜನತೆಯು ಪಾಲಿಸುವಂತೆ ಕೋರಿದರು.

ಈ ಸಂದರ್ಭದಲ್ಲಿ ಏಪ್ರಿಲ್ 12 ರವರೆಗೆ ಯಾರೂ ಮನೆಯೊಳಗೆ ಅಥವಾ ದೇವಸ್ಥಾನಗಳಲ್ಲಿಯೂ ಟೆಂಗಿನ ಕಾಯಿಗಳನ್ನು ಉಪಯೋಗಿಸುವದಿಲ್ಲ. ಕೊನೆಯ ದಿನವಾದ 12 ರಂದು ಬೆಳಿಗ್ಗೆ ಲಕ್ಕವ್ವದೇವಿಗೆ ಉಡಿ ತುಂಬುವ ಕಾರ್ಯ ನಡೆಸಿ ವಾರ ಹಿಡಿಯುವ ಕಾರ್ಯಕ್ಕೆ ಸಮಾಪ್ತಿಗೊಳಿಸಲಾಗುತ್ತದೆ.

ಶ್ರೀಶೈಲ ಉಳ್ಳಾಗಡ್ಡಿ, ಶ್ರೀಶೈಲ ದಭಾಡಿ, ಸಂ–ಜಯ ಕಕಮರಿ,
ಬಸವರಾಜ ಗುಂಡಿ, ದಾನಪ್ಪ ಹುಲಜತ್ತಿ, ಚನ್ನಪ್ಪ ಗುಣಕಿ, ಶ್ರೀಪಾದ ಬಾಣಕಾರ, ಬಸು ಜಾಡಗೌಡ, ಶಿವು ಬಾಗೇವಾಡಿ, ನಂದು ಕುಳ್ಳಿ, ಮಹಾಶಾಂತ ಶೆಟ್ಟಿ, ಪ್ರಶಾಂತ ಕೊಳಕಿ, ರಾಮಚಂದ್ರ ಬಡಿಗೇರ,
ಶೇಖರ ಸಂಪಗಾಂವಿ, ವಿಶ್ವನಾಥ ಆಳಗಿ, ರಾಜು ಬಡಿಗೇರ, ಸಿದ್ದು ಪಾಟೀಲ, ಮೋಪಗಾರ, ರಮೇಶ ಮಹಿಷವಾಡಗಿ ಸೇರಿದಂತೆ ಅನೇಕರಿದ್ದರು.

# ಶ್ರೀಶೈಲ ಪಾದಯಾತ್ರೆಗೆ ಶ್ರೀಗಳಿಂದ ಚಾಲನೆ

**ಚಿಮ್ಮಡ :** ಗ್ರಾಮದ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ಆಂದ್ರಪ್ರದೇಶದ ಶ್ರೀಶೈಲಂ ಕ್ಷೇತ್ರಕ್ಕೆ ಪಾದಯಾತ್ರೆಯ ಮೂಲಕ ತೆರಳುವ ಸುಮಾರು ಮುನ್ನೂರಕ್ಕೂ ಹೆಚ್ಚು ಪಾದಯಾತ್ರಿ ಭಕ್ತಾದಿಗಳಿಗೆ, ವಿಶೇಷ ಪೂಜೆಯೊಂದಿಗೆ ಶ್ರೀ ಪ್ರಭು ಮಹಾಸ್ವಾಮಿಗಳು ಚಾಲನೆ ನೀಡಿದರು.



ಹೋಳಿ ಹುಣ್ಣಿಮೆಯ ರಾತ್ರಿ ಗ್ರಾಮದ ಮಲ್ಲಿಕಾರ್ಜುನ ದೇವಸ್ಥಾನದ ಹತ್ತಿರ ಜಮಾವಣೆಗೊಂಡ ಮುನ್ನೂರಕ್ಕು ಹೆಚ್ಚು ಜನ ಭಕ್ತಾಧಿಗಳು ವಿಶೇಷವಾದ ಕಂಬಿ (ಮಲ್ಲಯ್ಯ) ಪೂಜೆ ನೆರವೇರಿದ ನಂತರ ತೆರಳಿದರು, ನಂತರ ಗ್ರಾಮದ ರಘುನಾಥ ಪ್ರೀಯ ಸಾಧು ಮಹಾರಾಜರ ಮಠಕ್ಕೆ ತೆರಳಿದರು. ಭಕ್ತರಿಗೆ ಶ್ರೀ ಜನಾರ್ಧನ ಮಹಾರಾಜರು ವಿಶೇಷ ಪೂಜೆ ಸಲ್ಲಿಸುವ ಮೂಲಕ ಬೀಳ್ಕೊಟ್ಟರು. ಪಾದಯಾತ್ರಿಗಳಿಗೆ ಗ್ರಾಮಸ್ಥರು ಹಣ್ಣು, ನೀರು, ಅಲ್ಪೋಪಹಾರ ವಿತರಿಸುವ ಮೂಲಕ ತಮ್ಮ ಭಕ್ತಿಸೇವೆ ಸಲ್ಲಿಸಿದರು.

ಗ್ರಾಮದ ಶ್ರೀ ಭ್ರಮರಾಂಬಾ ಮಲ್ಲಿಕಾರ್ಜುನ ಅನ್ನದಾಸೋಹ ಸೇವಾ ಸಮೀತಿಯಿಂದ ಪ್ರತೀ ವರ್ಷದಂತೆ
ಈ ಬಾರಿಯೂ ಈ ಭಾಗದ ಶ್ರೀಶೈಲ ಪಾದಯಾತ್ರಿಗಳಿಗೆ ಉಚಿತ ಅನ್ನದಾಸೋಹ ಹಾಗೂ ವೈದ್ಯಕೀಯ ಸೇವೆಯನ್ನು ಮಾ. 28ರಿಂದ ನಿರಂತರವಾಗಿ ಐದು ದಿನಗಳಕಾಲ ಆದ್ರಪ್ರದೇಶದ ಗಡಿ ಬಾಗದ ಕರಿಹೊಳಿ ಹತ್ತಿರ ನಡೆಯುತ್ತದೆ.

# ನಾಮನಿರ್ದೇಶಿತ ಪುರಸಭೆ ಸದಸ್ಯನಿಗೆ ಸನ್ಮಾನ

**ಮಹಾಲಿಂಗಪುರ :** ಸ್ಥಳೀಯ ಪಾಂಡುರಂಗ ಸದ್ಭಕ್ತ ಮಂಡಳಿಯ ಸದಸ್ಯ ಬುದ್ನಿಪಿಡಿ ನಿವಾಸಿ ಅಪ್ಪಾಸಾಬ ನಾಲಬಂದ ಅವರು ಇತ್ತಿಚಿಗೆ ಪುರಸಭೆ ನಾಮನಿರ್ದೇಶಿತ ಸದಸ್ಯರಾಗಿ ನೇಮಕಗೊಂಡ ಪ್ರಯುಕ್ತ ಪಾಂಡುರಂಗ ಸದ್ಭಕ್ತ ಮಂಡಳಿಯಿಂದ ಸನ್ಮಾನಿಸಲಾಯಿತು.



ಪಾಂಡುರಂಗ ಸದ್ಭಕ್ತ ಮಂಡಳಿಯ ಕೃಷ್ಣಗೌಡ ಪಾಟೀಲ, ಗೌಡಪ್ಪಗೌಡ ಪಾಟೀಲ, ನಾರಾಯಣಗೌಡ ಪಾಟೀಲ, ಮಲ್ಲಪ್ಪ ಅಂಬಣ್ಣಗೋಳ, ಸದಾಶಿವ ಶೇಗುಣಸಿ, ಮಹಾಲಿಂಗಗೌಡ ಪಾಟೀಲ, ಬಸಯ್ಯ ಮಠಪತಿ, ಕುಮಾರ ಪವಾರ, ಗಿರಿಮಲ್ಲಪ್ಪ ಯಾದವಾಡ, ಹನಮಂತ ಬಡಿಗೇರ, ಆದಿತ್ಯ ನಾಯಕ, ಬೇಬವ್ವ ಯಾದವಾಡ ಇದ್ದರು.

# ಮಹಾಲಿಂಗೇಶ್ವರ ದರ್ಶನ ಪಡೆದ ಪಿ.ಸಿ. ಗದ್ದಿಗೌಡರ

**ಮಹಾಲಿಂಗಪುರ :** ಬಾಗಲಕೋಟೆ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪಿ.ಸಿ.ಗದ್ದಿಗೌಡರ ಪಟ್ಟಣದ ಮಹಾಲಿಂಗೇಶ್ವರ ದೇವಸ್ಥಾನಕ್ಕೆ ಶುಕ್ರವಾರ ಭೇಟಿ ನೀಡಿ ದರ್ಶನ ಪಡೆದು ಈ ಭಾಗದಲ್ಲಿನ ಬಿಜೆಪಿ ಪ್ರಚಾರಕ್ಕೆ ಚಾಲನೆ ನೀಡಿದರು.



ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ನಂತರ ಮಠದ ಪೀಠಾಧಿಪತಿ ಮಹಾಲಿಂಗೇಶ್ವರ ಶ್ರೀಗಳಿಂದ ಆಶೀರ್ವಾದ ಪಡೆದು ಮಾತನಾಡಿದ ಅವರು, ಕಳೆದ ಹತ್ತು ವರ್ಷಗಳಿಂದ ಪ್ರಧಾನಿ ಮೋದಿ ನೇತೃತ್ವದಲ್ಲಿ ದೇಶ ಪ್ರಗತಿ ಸಾಧಿಸುತ್ತಿದೆ.ವಿಶ್ವದಲ್ಲೇ ಭಾರತ ದ್ದುಕಾಣುತ್ತಿದೆ. ಹೀಗಾಗಿ, ಮೋದಿ ಅವರನ್ನು ಮೂರನೇ ಬಾರಿಗೆ ಗೆಲ್ಲಿಸಿ ಮತ್ತೊಮ್ಮೆ ಅವ–ರಿಗೆ ಅಧಿಕಾರ ಕೊಡಬೇಕಾದ ಹೊಣೆಗಾರಿಕೆ ನಮ್ಮ ನಿಮ್ಮ ಮೇಲಿದೆ ಎಂದರು.

ಮುಖಂಡರಾದ ಬಸನಗೌಡ ಪಾಟೀಲ, ಮಹಾಂತೇಶ ಹಿಟ್ಟಿನಮಠ, ಮಹಾಲಿಂಗಪ್ಪ ಕುಳ್ಳೊಳ್ಳಿ, ಮಹಾಲಿಂಗಪ್ಪ ಕೋಳಿಗುಡ್ಡ, ಗುರುಪಾದ ಅಂಬಿ, ಶಂಕರಗೌಡ ಪಾಟೀಲ, ಆನಂದ ಖೋತ, ಲಕ್ಕಪ್ಪ ಚಮಕೇರಿ, ಬಸವರಾಜ ಹಿಟ್ಟಿನಮಠ, ಬಸವರಾಜ ಯರಗಟ್ಟಿ, ಮಹಾಲಿಂಗಪ್ಪ ಸನದಿ, ಜಿ.ಎಸ್.ಗೊಂಬಿ, ಬಸವರಾಜ ನಾಗನೂರ, ಹರೀಷ ನಾಯಕ, ಡಾ. ಅಶೋಕ ದಿನ್ನಿಮನಿ, ಶಿವಲಿಂಗ ಘಂಟಿ, ಭೀಮಸಿ ಗೌಂಡಿ, ವಿಜಯ ಸಬಕಾಳೆ, ವಿಷ್ಣುಗೌಡ ಪಾಟೀಲ, ಬಸವರಾಜ ಗಿರಿಸಾಗರ, ಶಿವನಗೌಡ ಪಾಟೀಲ, ಶಿವಾನಂದ ಹುಣಶ್ಯಾಳ, ಆನಂದ ಪವಾರ, ಮಹೇಶ ಜಿಡ್ಡಿಮನಿ, ಮಹಾಂತೇಶ ಪಾತ್ರೋಟ, ತಿಪ್ಪಣ್ಣ ಬಂಡಿವಡ್ಡರ ಸೇ–ರಿದಂತೆ ಹಲವರು ಇದ್ದರು.

# ಹೋಳಿ ಹುಣ್ಣಿಮೆ 47ನೇ ವರ್ಷದ ಶಿವಾನುಭವಗೋಷ್ಠಿ
## ಸತ್ಸಂಗದಿಂದ ಮಾನವ ಜನ್ಮದ ಸಾರ್ಥಕತೆ: ಸಹಜಾನಂದ ಸ್ವಾಮಿಜಿ

**ಮಹಾಲಿಂಗಪುರ :** ಮನುಷ್ಯ ಸತ್ಸಂಗದಲ್ಲಿ ಭಾಗವಹಿಸಿ ದಾನ, ಧರ್ಮ ಮತ್ತು ಅಧ್ಯಾತ್ಮ ಸಂಸ್ಕಾರದ ಬಲದಿಂದ ಮಾನವ ಜನ್ಮದ ಸಫಲತೆಯನ್ನು ಪಡೆದುಕೊಳ್ಳಬಹುದಾಗಿದೆ ಎಂದು ಸಿದ್ದಾರೂಢ ಬ್ರಹ್ಮವಿದ್ಯಾಶ್ರಮದ ಸಹ–ಜಯೋಗಿ ಸಹಜಾನಂದ ಸ್ವಾಮಿಜಿ ಹೇಳಿದರು.



ಮಂಗಳವಾರ ಪಟ್ಟಣದ ಬಸವರಾಜ ಢಪಳಾಪೂರ ಅವರ ತೋಟದಲ್ಲಿ ಹೋಳಿ ಹುಣ್ಣಿಮೆಯ ಬಣ್ಣದ ಬದಲಾಗಿ ಜರುಗಿದ 47ನೇ ವರ್ಷದ ವಿಶೇಷ ಹೋಳಿ ಹುಣ್ಣಿಮೆ ಶಿವಾನುಭವ ಗೋಷ್ಠಿಯ ಸಾನಿಧ್ಯವಹಿಸಿ ಮಾತನಾಡಿದ ಅವರು ಸತ್ಸಂಗದ ಸಾಧನೆಗೆ ಸಜ್ಜರ ಸಂಘದ ಅವಶ್ಯಕತೆಯಿದ್ದು, ವಿವೇಕ ಮತ್ತು ಜ್ಞಾನದ ಎಂಬ ಮನುಷ್ಯನಲ್ಲಿನ ಎರಡು ಅಂತರಮುಖಿಯ ಕಣ್ಣುಗಳನ್ನು ತೆರೆಸಲು ಸತ್ಸಂಗ ಮತ್ತು ಮಹಾತ್ಮರ ಸನ್ನಿಧಿಗೆ ಶರಣಾಗಬೇಕು. ಸತ್ಸಂಗದ ಲಾಭವೆಂದರೆ ಮನಶಾಂತಿಯ ಜೊತೆಗೆ ನರ ಮಾನವನನ್ನು ಮಹಾದೇವನನ್ನಾಗಿ ಮಾಡುವದಾಗಿದೆ. ಇಂದಿನ ಯುವಜನತೆ ದುಷ್ಟ–ಚಟಗಳಿಗೆ ಬಲಿಯಾಗದೆ ಸದಾ ಸತ್ಸಂಗದಲ್ಲಿ ಭಾಗವಹಿಸಿ, ಭಗವಂತನ ನಾಮಸ್ಮರಣೆಯೊಂದಿಗೆ ಸನ್ಮಾರ್ಗದಲ್ಲಿ ನಡೆದು ಜೀವನ ಸಾರ್ಥಕ ಮಾಡಿಕೊಳ್ಳಬೇಕಾಗಿದೆ ಎಂದರು.

ಮಲ್ಲೇಶಪ್ಪ ಕಟಗಿ ಶರಣರು ಮಾತನಾಡಿ ಮನುಷ್ಯ ಗಳಿಸುವ ಭೌತಿಕ ಸಂಪತ್ತಿಗಿಂತ ಭೌದ್ಧಿಕ ಸಂಪತ್ತಿಗೆ ಹೆಚ್ಚಿನ ಮಹತ್ವವಿದೆ. ಇಂದು ಸಿರಿವಂತರಾಗುವುದಕ್ಕಿಂತ ಸಂಸ್ಕಾರಯುತ ಮನುಷ್ಯರಾಗಿ ಬಾಳುವುದು ಅವಶ್ಯಕ. ಹಿಂದಿನಗಿಂತಲೂ ಇಂದು ಅಧ್ಯಾತ್ಮ ಅತ್ಯವಶ್ಯಕವಾಗಿದೆ. ನೀತಿ ಇಲ್ಲದ ಶಿಕ್ಷಣ, ಬೀತಿ ಇಲ್ಲದ ಶಾಸನ, ಮೀತಿ ಇಲ್ಲದ ಜೀವನ, ಸೀಮಾತೀತ ಸ್ವಾತಂತ್ರ್ಯದಿಂದಾಗಿ ಮನುಷ್ಯನ ಜೀವನಕ್ರಮವು ವಿನಾಶದತ್ತ ಸಾಗಿದ ಕಾರಣ ಪ್ರತಿಯೊಬ್ಬರು ಅಧ್ಯಾತ್ಮದತ್ತ ಒಲವು ತೋರಿಸಿ, ಬದುಕನ್ನು ಬಂಗಾರ ಮಾಡಿಕೊಳ್ಳಿರಿ ಎಂದರು.

ಕಂಕನವಾಡಿ ಮಾರುತಿ ಶರಣರು, ರನ್ನಬೆಳಗಲಿ ಸದಾಶಿವ ಗುರೂಜಿ, ಮೂಗಳಖೋಡ ಬಸವರಾಜ ಲಕ್ಷ್ಮೇಶ್ವರ ಶರಣರು, ಸಿದ್ರಾಮಯ್ಯ ಗೋಠೆ, ಶಿಕ್ಷಕ ಹುಮಾಯೂನ ಸುತಾರ ಮಾತನಾಡಿ ಸತ್ಸಂಗದ ಲಾಭ ಮತ್ತು ಮಹತ್ವವನ್ನು ತಿಳಿಸಿದರು.

**ಗಮನ ಸೆಳೆದ ಭಜನೆ :** ಮಧ್ಯಾಹ್ನ 12ರಿಂದ ಸಂಜೆ 5ರವರೆಗೆ ಜರುಗಿದ ಭಜನಾ ಕಾರ್ಯಕ್ರಮಗಳು ಅಧ್ಯಾತ್ಮಪ್ರೀಯರ ಗಮನ ಸೆಳೆದವು. ಮಹಾಲಿಂಗಪುರ, ರನ್ನಬೆಳಗಲಿ, ಬುದ್ನಿಪಿಡಿ, ತೇರದಾಳ, ಅಕ್ಕಿಮರಡಿ, ಹಿಪ್ಪರಗಿ, ಕೆಸರಗೊಪ್ಪ ಸೇರಿದಂತೆ ವಿವಿಧ ಊರುಗಳು 14 ಕಲಾ ತಂಡಗಳು ನಡೆಸಿಕೊಟ್ಟ ಭಜನಾ ಕಾರ್ಯಕ್ರಮಗಳು ಎಲ್ಲರ ಗಮನ ಸೆಳೆದವು.

ಬಸವರಾಜ ಢಪಳಾಪೂರ, ವಿವೇಕ ರವಿ ಢಪಳಾಪೂರ, ಈಶ್ವರಪ್ಪ ಮುಂಡಗನೂರ, ಶ್ರೀಶೈಲಪ್ಪ ಉಳ್ಳೇಗಡ್ಡಿ, ಗೌಡಪ್ಪಗೌಡ ಪಾಟೀಲ, ಚನ್ನಬಸು ಹುರಕಡ್ಲಿ, ಹನಮಂತ ಮೀರಾಪಟ್ಟಿ, ಜಯವಂತ ಬಿಳ್ಳೂರ, ಶಿವಾನಂದ ಜಾಲಿಹಾಳ, ಸಿ.ಎಂ.ಕಟಗಿ, ಬಸವರಾಜ ನುಚ್ಚಿ, ಮಹಿಬೂಬ ಸನದಿ, ಮಹಾದೇವ ಕೌಜಲಗಿ, ಎಸ್.ಎಂ.ಅಣ್ಣಿಗೇರಿ, ವಿಜಯಕುಮಾರ ಸಬಕಾಳೆ, ಶಂಕರ ನಿಲಾರಿ, ಸದಾಶಿವಯ್ಯ ಅಕ್ಕಿಮರಡಿ, ಚನ್ನಪ್ಪ ಚಂಡೋಲ, ಎಸ್.ಬಿ.ರಡ್ಡೇರಹಟ್ಟಿ ಸೇ–ರಿದಂತೆ ಹಲವರು ಇದ್ದರು.

ಶಿಕ್ಷಕ ಬಸವರಾಜ ಮೇಟಿ ಪ್ರಾರ್ಥಿಸಿದರು. ಮಲ್ಲೇಶಪ್ಪ ಕಟಗಿ ಸ್ವಾಗತಿಸಿದರು. ಪತ್ರಕರ್ತ ಚಂದ್ರಶೇಖರ ಮೋರೆ ನಿರೂಪಿಸಿ–ವಂದಿಸಿದರು.

# ತೇರದಾಳದಲ್ಲಿ ಸಂಭ್ರಮಿಸಿದ ಹೋಳಿ ಹಬ್ಬ




**ತೇರದಾಳ :** ಹೋಳಿ ಹಬ್ಬದ ನಿಮಿತ್ತ ಸೋಮವಾರ ಪಟ್ಟಣದಲ್ಲಿ ಯುವಕರು, ಮಹಿಳೆಯರು ಮಟಾಣಿಗಳು ಸೇರಿದಂತೆ ಬಣ್ಣದ ಆಟ ಆಡಿ ಸಂಭ್ರಮಿಸಿದರು. ನಸುಕಿನ ಜಾವ ಪಟ್ಟಣದ ಹಲವಡೆ ಯುವಕರು ಕಾಮಣ್ಣನ ಕಿಚ್ಚು ಹಚ್ಚಿ ಬೊಬ್ಬೆ ಹೊಡೆದರು.

ಬಳಿಕ ಗಲ್ಲಿ ಗಲ್ಲಿಯಲ್ಲಿ ಸುತ್ತಾಡುತ್ತ ಮನೆಗಳಿಗೆ ತೆರಳಿ ಬಣ್ಣಧೋಕುಳಿ ಆಡಿದರು. ಪೊಲೀಸ್ ಇಲಾಖೆ ಮೊದಲೆ ಸೂಚನೆ ನೀಡದಂತೆ ರಾಸಾಯನಿಕ ಮಿಶ್ರಿತ ಬಣ್ಣ ಬಳಸದೆ ಪೌಡರ ಬಣ್ಣ ಬಳಸುವ ಮೂಲಕ ಸೂಚನೆ ಪಾಲಿಸಿದರು. ಸಂಪ್ರದಾಯದಂತೆ ಕಲ್ಲಟ್ಟಿ ಗಲ್ಲಿಯಲ್ಲಿ ಗುಗ್ಗಳ ಕಾರ್ಯಕ್ರಮ ಜರುಗಿತು. ಗುಗ್ಗುಳ ಮುಗಿದ ಬಳಿಕ ಬಣ್ಣದ ಆಟ ಮುಗಿಸುವುದು ಪಟ್ಟಣದಲ್ಲಿ ಮೊದಲಿನಿಂದಲೂ ಬಂದ ಸಂಪ್ರದಾಯವಾಗಿದೆ. ನೆತ್ತಿ ಸುಡುವ ಬಿಸಿಲಿನ ತಾಪಕ್ಕೆ ಮದ್ಯಾಹ್ನ ಅನ್ನುವಷ್ಟರಲ್ಲಿ ಹೋಳಿ ಹಬ್ಬ ಪಟ್ಟಣದಲ್ಲಿ ಪೂರ್ಣಗೊಂಡಿತು.

# ಅಂಗದ ಮೇಲೆ ಲಿಂಗವಿದ್ದರೆ ಅವನೇ ಸಂಗಮನಾಥ: ಐ.ಆರ್. ಮಠಪತಿ

**ಹಾರೂಗೇರಿ :** ಸ್ಥಳೀಯ ಸಾಹಿತಿ, ಗ್ರಂಥಪಾಲಕ ಕಲ್ಲೇಶ ಕುಂಬಾರ ಅವರ ಮಹಾಮನೆಯಲ್ಲಿ ಜರುಗಿದ ವಚನ ವೈಭವ ಹಾಗೂ ಲಿಂಗದೀಕ್ಷೆ ಕಾರ್ಯಕ್ರಮದ ಸಾನಿಧ್ಯವನ್ನು ಶರಣ ವಿಚಾರ ವಾಹಿನಿ ಅಧ್ಯಕ್ಷರು, ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಶರಣ ಐ. ಆರ್. ಮಠಪತಿಯವರು ವಹಿಸಿದ್ದರು. ಅವರು ತಮ್ಮ ಪ್ರವಚನದಲ್ಲಿ , 16 ತತ್ವಗಳನ್ನ ಹಾಕಿ,12 ವರ್ಷಗಳ ಕಾಲ ಶ್ರಮಪಟ್ಟು ಇಷ್ಟಲಿಂಗ ಹುಟ್ಟುಹಾಕಿದ ಅಣ್ಣ ಬಸವಣ್ಣನವರ ಕಾರ್ಯದಿಂದ ಈಹೊತ್ತು ವರ್ಣಭೇದ, ವರ್ಗಭೇದಗಳು ಕಡಿಮೆಯಾದವಲ್ಲದೆ, ಸ್ವಾತಂತ್ರ್ಯದ ಬದುಕಿಗೆ ನಾಂದಿ ಹಾಡಿದರು. ಅಂಗದ ಮೇಲೆ ಲಿಂಗವಿದ್ದ ಮನುಜ ಸಂಗಮನಾಥ



ಎಂದು ನುಡಿದ ಬಸವಣ್ಣನವರು ಅಂದು ಕೆಳವರ್ಗದವರನ್ನು ಮೇಲಕ್ಕೆತ್ತಿದ್ದರಿಂದ ಇಂದು ಸಾಂಸ್ಕೃತಿಕ ರಾಯಭಾರಿಯಾಗಿ ಗುರುತಿಸಿದ್ದು ಹೆಮ್ಮೆಯ ವಿಷಯ. ಅಂದು ಬಸವಣ್ಣ ಮಾಡಿದ ಮಹಾಲಿಂಗಕಾಯಕ ಇಂದು ಬದುಕಿನ ಆತ್ಮದ ಉದ್ಧಾರಕವಾಗಿದೆ. 1913 ರಲ್ಲಿ ಬಸವ ಜಯಂತಿಯನ್ನು ಹುಟ್ಟುಹಾಕಿದ ಹರ್ಡೇಕರ ಮಂಜಪ್ಪನವರನ್ನು ,

ವಚನ ಅಕ್ಷರ ಸಾಮ್ರಾಟ, ವಚನ ಪಿತಾಮಹ ಡಾ.ಫ. ಗು. ಹಳಕಟ್ಟಿಯವರನ್ನು ನೆನೆಸಿಕೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಅಧ್ಯಕ್ಷತೆಯನ್ನು ಹಿರಿಯರಾದ ಪೂಜ್ಯ ಶ್ರೀ ಗಂಗಾಧರಯ್ಯ ಹಿರೇಮಠ,ಯಬರಟ್ಟಿಯ ಹಿರಿಯರಾದ ಜಿ. ಎಂ. ಪಾಟೀಲ, ಕಾರ್ಯದರ್ಶಿಗಳಾದ ಎಸ್. ಎಲ್. ಬಾಡಗಿ, ಹಿರಿಯರಾದ ಅಪ್ಪಣ್ಣ ಕುಂಬಾರ, ಅನಿಲ ಕುಂಬಾರ, ಲೋಹಿತ್ ಕುಂಬಾರ ಹಾಗೂ ಅನೇಕ ತಾಯಂದಿರು, ಹಿರಿಯರು, ಮಕ್ಕಳು ಉಪಸ್ಥಿತರಿದ್ದರು. ಶಿವಕುಮಾರ ಮೊಕಾಶಿ ಸೊಗಸಾಗಿ ನಿರೂಪಿಸಿದರು.

# ಹೋಳಿ ಹಬ್ಬ: ಬೃಹತ್ ಹಲಗೆ ಮೇಳ

**ಮಹಾಲಿಂಗಪುರ :** ಹೋಳಿ ಹಬ್ಬದ ಅಂಗವಾಗಿ ಹಿಂದು ಸಂಘಟನೆಗಳ ಒಕ್ಕೂಟದ ವತಿಯಿಂದ ಪಟ್ಟಣದಲ್ಲಿ ಬೃಹತ್ ಹಲಗೆ ಮೇಳ ನಡೆಯಿತು.

ಬಸವೇಶ್ವರ ವೃತ್ತದಲ್ಲಿ ಶಾಸಕ ಸಿದ್ದು ಸವದಿ ಅವರು ಭಾರತ ಮಾತೆ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಮಾಡುವ ಮೂಲಕ ಹಾಗೂ ಹಲಗೆ ಬಾರಿಸುವ ಮೂಲಕ ಹಲಗೆ ಮೇಳಕ್ಕೆ ಚಾಲನೆ ನೀಡಿದರು.ಬಸವೇಶ್ವರ ವೃತ್ತದಿಂದ ವಿವಿಧವಾದ್ಯವೃಂದದೊಂದಿಗೆ ಸಾಗಿದ ಹಲಗೆ ಮೇಳ ಡಬಲ್ ರಸ್ತೆ, ನಡಚೌಕಿ, ಜವಳಿ ಬಜಾರ್ ಮಾರ್ಗವಾಗಿ ಗಾಂಧಿ ವೃತ್ತದಲ್ಲಿ ಸಮಾರೋಪಗೊಂಡಿತು.

ಹಿಂದು ಸಂಘಟನೆಗಳ ಒಕ್ಕೂಟದ ಮುಖಂಡ ಭೈರೇಶ ಆದೆಪ್ಪನವರ ಮಾತನಾಡಿ, ಇಂದಿನ ಕಲುಷಿತ ವಾತಾವರಣದಲ್ಲಿ ಯುವಶಕ್ತಿಯು ನಿರಾಶೆ



ನಿರುತ್ಸಾಹದ ಜೊತೆಗೆ ವಿವಿಧ ದುಶ್ಚಟಗಳ ದಾಸರಾಗಿ ತಮ್ಮ ಅಮೂಲ್ಯವಾದ ಜೀವನ ಹಾಳು ಮಾಡಿಕೊಳ್ಳುತ್ತಿದ್ದಾರೆ. ಹೀಗಾಗಿ, ಧಾರ್ಮಿಕ ಹಬ್ಬಗಳಿಂದ ಯುವಕರಲ್ಲಿ ಜಾಗೃತಿ ಮೂಡಿಸುವದು ಹಾಗೂ ಸಮುದಾಯವನ್ನು ದುಶ್ಚಟಗಳಿಂದ ದೂರಗೊಳಿಸುವ ಪ್ರೇರಣೆಗಾಗಿ ಹಲಗೆ ಮೇಳ ಹಮ್ಮಿಕೊಳ್ಳಲಾಗಿದೆ ಎಂದರು.

ಕೇಸರಿ ಧ್ವಜ, ಪಟಾಕಿಗಳ ಅಬ್ಬರ, ಹಲಗೆ ಬಡಿತ, ಲಯಬದ್ಧ ಕುಣಿತ ಇವುಗಳ ಸಂಭ್ರಮದಿಂದ ಬೀದಿ ಬೀದಿಗಳು ಕೇಸರಿಮಯವಾಗಿದ್ದವು.ಸಂಗಾನಟ್ಟಿಂಮಲ್ಲಿಯ ಹಲಗೆಮೇಳದ ಕಲಾವಿದರು ಹಲಗೆ ಹಬ್ಬದ ಪ್ರಮುಖ ಆಕರ್ಷಣೆಯ ಕೇಂದ್ರಬಿಂದುವಾಗಿದ್ದರು. ಮುಖಂಡರಾದ ಮಹಾಂತೇಶ ಹಿಟ್ಟಿನಮಠ, ಶಂಕರಗೌಡ ಪಾಟೀಲ, ಅಶೋಕಗೌಡ ಪಾಟೀಲ, ಶಿವನಗೌಡ ಪಾಟೀಲ, ಸಂಜು ಚನ್ನಾಳ, ವಿಷ್ಣುಗೌಡ ಪಾಟೀಲ, ಶಿವಾನಂದ ಅಂಗಡಿ, ಹಣಮಂತ ಯರಗಟ್ಟಿ, ಬಸವರಾಜ ಯರಗಟ್ಟಿ, ಮಂಜು ಸಿಂಪಿ, ರವಿ ಹುಣಶ್ಯಾಳ, ಭರತ ಕದ್ದಿಮನಿ, ಕುಮಾರ ನಾರಾಯಣಕರ, ಮಹೇಶ ಜಿಡ್ಡಿಮನಿ, ಅಶ್ವಿನ ಪಟೇಲರಮಣಿ, ರಾಘು ಗರಗಟ್ಟಿ, ಮಹಾಂತೇಶ ಹಟ್ಟಿ, ಶ್ರೀನಿಧಿ ಕುಲಕರ್ಣಿ, ಅಭಿಷೇಕ ಲಮಾಣಿ, ಸಚಿನ್ ಕಲ್ಮಾಡಿ, ಶೇಖರ ಮಗದುಮ್, ಬಸವರಾಜ ಮಡಿವಾಳ, ಮಹಾಲಿಂಗ ಪಂಚಕಟ್ಟಿಮಠ, ಶ್ರೀಶೈಲಗೌಡ ಪಾಟೀಲ ಸೇರಿದಂತೆ ಹಿಂದೂಪರ ಸಂಘಟನೆಗಳ ನೂರಾರು ಕಾರ್ಯಕರ್ತರು ಹಲಗೆ ಹಬ್ಬದಲ್ಲಿ ಭಾಗವಹಿಸಿದ್ದರು.

# ರಸ್ತೆ ಕಾಮಗಾರಿ ಪರಿಶೀಲಿಸಿದ ಡಿಸಿ



**ವಿಜಯಪುರ :** ಪ್ರವಾಸೋದ್ಯಮ ಇಲಾಖೆಯ ಅನುದಾನದ ಅಡಿ ಮಂಜೂರಾಗಿರುವ ವಿಜಯಪುರ ನಗರದ ರೈಲು ನಿಲ್ದಾಣ ಸಂಪರ್ಕಿಸುವ ರಸ್ತೆ,

ರೈಲು ನಿಲ್ದಾಣದಿಂದ ರೈಲ್ವೆ ಬ್ರಿಜ್ ವರೆಗಿನ ಕಾಮಗಾರಿಯನ್ನು ಜಿಲ್ಲಾಧಿಕಾರಿ ಟಿ. ಭೂಬಾಲನ್ ಅವರು ಗುರುವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ಪ್ರವಾಸೋದ್ಯಮ ಇಲಾಖೆ ಉಪನಿರ್ದೇಶಕರು, ಕೆ ಆರ್ ಐ ಡಿ ಎಲ್ ಸಂಸ್ಥೆ ಕಾರ್ಯಪಾಲಕ ಅಭಿಯಂತರ ಹಾಗೂ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

# ಹೂ ಕೊಟ್ಟು ಪರೀಕ್ಷಾರ್ಥಿಗಳಿಗೆ ಸ್ವಾಗತ

ಮಹಾಲಿಂಗಪುರ : ಕೆಎಲ್ಇ ಸಂಸ್ಥೆಯ ಎಸ್‌ಸಿಪಿ ಪ್ರೌಢಶಾಲೆಯ ಎಸ್ಎಸ್ಎಲ್‌ಸಿ ಪರೀಕ್ಷಾ ಕೇಂದ್ರದಲ್ಲಿ ಸೋಮವಾರ ಮೊದಲ ಪರೀಕ್ಷೆಗೆ ಆಗಮಿಸಿದ ಪರೀಕ್ಷಾರ್ಥಿಗಳಿಗೆ ಪರೀಕ್ಷಾ ಸಿಬ್ಬಂದಿ ಗೇಟ್ ಬಳಿ ನಿಂತು ಹೂಕೊಟ್ಟು ಸ್ವಾಗತ ಮಾಡಿಕೊಂಡರು. ಭಯ ಬಿಟ್ಟು ಭರವಸೆಯಿಂದ ಬರೆಯಿರಿ ಎಂದು ಹಾರೈಸಿದರು. ಪರೀಕ್ಷಾ ಮುಖ್ಯಸ್ಥ ಎಂಡಿಆರ್ಎಸ್ ಪ್ರಾಂಶುಪಾಲ ಎ.ಸಿ.ಹೂಗಾರ, ಉಪಪ್ರಾಂಶುಪಾಲ ಬಿ.ಎನ್.ಅರಕೇರಿ ಇದ್ದರು.



# ಯುವ ಜನಾಂಗದಲ್ಲಿ ಧರ್ಮ ರಾಷ್ಟ್ರ ಪ್ರಜ್ಞೆ ಜಾಗೃತಗೊಳ್ಳಲಿ: ಶ್ರೀ ರಂಭಾಪುರಿ ಜಗದ್ಗುರುಗಳು

**ರಂಭಾಪುರಿ ಪೀಠ(ಬಾಳೆಹೊನ್ನೂರು) :** ಬೆಳೆಯುತ್ತಿರುವ ಯುವ ಜನಾಂಗ ಈ ದೇಶದ ಅಮೂಲ್ಯ ಆಸ್ತಿ. ಅವರಿಗೆ ಯೋಗ್ಯ ಸಂಸ್ಕಾರ ಮತ್ತು ಆದರ್ಶಗಳನ್ನು ಕಲಿಸಿಕೊಡುವ ಅಗತ್ಯವಿದೆ. ಯುವ ಜನಾಂಗದಲ್ಲಿ ಧರ್ಮ ಪ್ರಜ್ಞೆ ಮತ್ತು ರಾಷ್ಟ್ರ ಪ್ರಜ್ಞೆ ಜಾಗೃತಗೊಳ್ಳಬೇಕೆಂದು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ ಹಾಗೂ ಕ್ಷೇತ್ರನಾಥ ವೀರಭದ್ರಸ್ವಾಮಿ ಮಹಾರಥೋತ್ಸವದ ಅಂಗವಾಗಿ ಶನಿವಾರ ಜರುಗಿದ ಯುವ ಜನಾಂಗದಲ್ಲಿ ಧರ್ಮ ಪ್ರಜ್ಞೆ-ರಾಷ್ಟ್ರ ಪ್ರಜ್ಞೆ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ದೊಡ್ಡ ದೊಡ್ಡ ಮಾತುಗಳನ್ನು ಆಡುವುದರಿಂದ ಮನುಷ್ಯ ದೊಡ್ಡವನೆಂದೆನಿಸಿಕೊಳ್ಳಲಾರ. ದೊಡ್ಡ ಮನಸ್ಸು ಗುಣಗಳಿಂದ ದೊಡ್ಡವರಾಗಲು ಸಾಧ್ಯವಿದೆ. ದೇಶ ನಮಗೆ ಏನು ಕೊಟ್ಟಿದೆ ಅನ್ನುವುದಕ್ಕಿಂತ ದೇಶಕ್ಕಾಗಿ ನಾವೇನು ಕೊಟ್ಟಿದ್ದೇವೆ ಎಂಬುದು ಮುಖ್ಯ. ಯುವ ಜನಾಂಗ ಆಲಸ್ಯ ಮತ್ತು ದುರ್ವ್ಯಸನಗಳಿಂದ ದೂರವಾಗಿ ಸದೃಢ ಸೂಕ್ತ ರಾಷ್ಟ್ರ ನಿರ್ಮಾಣದಲ್ಲಿ ತೊಡಗಿಸಿಕೊಂಡರೆ ಅದ್ಭುತ ಸಾಧನೆ ಮಾಡಲು ಸಾಧ್ಯ. ಬದುಕಿನ ಯಾವ ದಿನವೂ ವ್ಯರ್ಥವಲ್ಲ. ಒಳ್ಳೆಯ ದಿನಗಳಿಂದ ಸಂತೋಷ ಸಿಗುತ್ತದೆ. ಕೆಟ್ಟ ದಿನಗಳಿಂದ ಅನುಭವ ಸಿಗುತ್ತದೆ. ವಿದ್ಯೆ ಕಲಿತ ನಂತರ ಗುರು ಸಂಪತ್ತು ಬಂದಾಗ ಸ್ನೇಹ ಹೆಂಡತಿ ಬಂದಾಗ ಹೆತ್ತವರನ್ನು ಎಂದಿಗೂ ಮರೆಯಬಾರದು. ಸಮಾಜದಲ್ಲಿ ಗೌರವ ಘನತೆ ಪ್ರಾಪ್ತವಾದ ದಿನಗಳಲ್ಲಿ ನಡೆದು ಬಂದ ದಾರಿಯನ್ನು ಮರೆಯಬಾರದು. ಕಾಲಿಗೆ ಆದ ಗಾಯ ಹೇಗೆ ಬದುಕಬೇಕೆಂಬುದನ್ನು ಕಲಿಸುತ್ತದೆ.



ಶ್ವಾಸ ಇದ್ದರೆ ಬದುಕು. ಶ್ವಾಸ ಇಲ್ಲದಿದ್ದರೆ ಜೀವನ ಮುಗಿಯುತ್ತದೆ. ವಿಶ್ವಾಸವಿದ್ದರೆ ಸಂಬಂಧ. ಇಲ್ಲದಿದ್ದರೆ ಸಂಬಂಧಗಳು ನಾಶಗೊಳ್ಳುತ್ತವೆ.

ಆದ್ದರಿಂದ ಯುವ ಜನಾಂಗ ಜಾಗೃತಗೊಂಡು ಧರ್ಮ ಸಂಸ್ಕೃತಿ ಪರಂಪರೆ ದೇಶಭಕ್ತಿ ಮೈಗೂಡಿಸಿಕೊಂಡು ಬಾಳಬೇಕೆಂದರು. ಮಾಜಿ ಮುಖ್ಯ ಮಂತ್ರಿ ಬಸವರಾಜ ಬೊಮ್ಮಾಯಿಯವರು ಮಾತನಾಡಿ ಭಯೋತ್ಪಾದನೆ ನಿಗ್ರಹಹ ಸಾಧ್ಯವಾಗುತ್ತಿಲ್ಲ. ಮನ:ಪರಿವರ್ತನೆಯಿಂದ ಮಾತ್ರ ಸಾಧ್ಯ. ಧರ್ಮದ ಹೆಸರಿನಲ್ಲಿ ಭಯೋತ್ಪಾದನೆ ನಡೆದಿರುವುದು ದುರ್ದೈವ. ಶ್ರೀ ಜಗದ್ಗುರು ರೇಣುಕಾಚಾರ್ಯರು ಸಾರಿದ ಮಾನವ ಧರ್ಮಕ್ಕೆ ಜಯವಾಗಲಿ, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಇಂದಿಗೂ ಪ್ರಸ್ತುತವಾಗಿದೆ.

ಅವರು ಸಿದ್ಧಾಂತ ಶಿಖಾಮಣಿ ಮೂಲಕ ಅಮೂಲ್ಯ ಸಂದೇಶ ನೀಡಿದ್ದಾರೆ. ಸಮಾಜದಲ್ಲಿ ಶ್ರದ್ಧೆ ಶಾಂತಿ ಇದೆ ಸಮಾನತೆ ಇದೆ.

ವೀರಶೈವರೆಂದರೆ ಭಕ್ತಿಯಲ್ಲಿಯೂ ವೀರರು. ಬದುಕಿನಲ್ಲಿಯೂ ವೀರರು. ಸರಳ ಬದುಕನ್ನು ನಾವಿಂದು ಕ್ಲಿಷ್ಟ ಮಾಡಿಕೊಂಡಿದ್ದೇವೆ. ಜೀವನದಲ್ಲಿ ಮುಗ್ಧತೆಯನ್ನು ಕಾಪಾಡಿಕೊಂಡು ಬರುವುದು ಆತ್ಮಸಾಕ್ಷಿಯಂತೆ ನಡೆದುಕೊಳ್ಳುವುದ ಬಲು ಕಷ್ಟದ ಕೆಲಸ. ತಮ್ಮ ಅಧಿಕಾರಾವಧಿಯಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿಯನ್ನು ಸರ್ಕಾರದಿಂದ ನಡೆಸುವಂತೆ ಆದೇಶ ಮಾಡಿದ್ದನ್ನು ನೆನಪಿಸಿಕೊಂಡರು. ಶ್ರೀ ಜಗದ್ಗುರು ರೇಣುಕಾಚಾರ್ಯರ ಮೌಲ್ಯಾಧಾರಿತ ಧಾರ್ಮಿಕ ಚಿಂತನಗಳು ನಮ್ಮೆಲ್ಲರ ಬಾಳಿಗೆ ಆಶಾಕಿರಣವೆಂದರು.

ಧರ್ಮ ಸಮಾರಂಭದಲ್ಲಿ ಪಾಲ್ಗೊಂಡ ಮೈಸೂರು ವಿಜಯವಾಣಿಯ ಎ.ಆರ್. ರಘುರಾಮ ಮಾತನಾಡಿ ಬೆಳಕಿಗೆ ಮಹತ್ವ ಬಂದಿದ್ದೆ ಕತ್ತಲೆಯಿಂದ. ಸುಖಕ್ಕೊಂದು ಅರ್ಥ ಬರುವುದೇ ಕಷ್ಟದಿಂದ ಎಂಬುದನ್ನು ಮರೆಯಬಾರದು. ಧರ್ಮ ಪೀಠದ ನಿರಂತರವಾದ ಪರಿಶ್ರಮ ಮತ್ತು ಬೋಧನೆಯಿಂದಾಗಿ ನಮ್ಮೆಲ್ಲರ ಬಾಳು ಸುಖಮಯವಾಗಿ ಸಾಗುತ್ತಲಿದೆ. ಹೊರಗೆ ಬಡವನವಿದ್ದು ಒಳಗೆ ಸಿರಿತನ ಇದ್ದರೆ ಬದುಕು ಸಾಗೀತು. ಹೊರಗೆ ಸಿರಿತನವಿದ್ದು ಒಳಗೆ ಬಡತನವಿದ್ದರೆ ಬಾಳುವುದು ಬಲು ಕಷ್ಟ.

ನೇತೃತ್ವ ವಹಿಸಿದ ಸೂಡಿ ಜುಕ್ತಿ ಹಿರೇಮಠದ ಡಾ॥ ಕೊಟ್ಟೂರು ಬಸವೇಶ್ವರ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ ನಾಗರೀಕ ಸಮಾಜದಲ್ಲಿ ಕೆಲವು ಅನಾಗರಿಕ ವರ್ತನೆಗಳು ನಡೆಯುತ್ತಿರುವುದು ಒಳ್ಳೆಯದಲ್ಲ. ಬೆಳೆಯುವ ಜನಾಂಗದಲ್ಲಿ ಸಂಸ್ಕಾರ ಸಂಸ್ಕೃತಿ ದೇಶ ಧರ್ಮ ಇವುಗಳ ಬಗ್ಗೆ ಸ್ವಾಭಿಮಾನ ಬೆಳೆದುಕೊಂಡು ಬರುವ ಅವಶ್ಯಕತೆ ಇದೆಯೆಂದರು. ಹರಪನಹಳ್ಳಿ ತೆಗ್ಗಿನಮಠ ಸಂಸ್ಥಾನದ ವರಸದ್ಯೋಜಾತ ಶಿವಾಚಾರ್ಯ ಸ್ವಾಮಿಗಳು ಪ್ರಾಸ್ತಾವಿಕ ನುಡಿದರು. ದುಗ್ಲಿ-ಕಡೇನಂದಿಹಳ್ಳಿ ಕ್ಷೇತ್ರದ ರೇವಣಸಿದ್ಧೇಶ್ವರ ಶಿವಾಚಾರ್ಯ ಸ್ವಾಮಿಗಳು, ಕಾರ್ಜುವಳ್ಳಿ ಸದಾಶಿವ ಶಿವಾಚಾರ್ಯ ಸ್ವಾಮಿಗಳು, ಹುಬ್ಬಳ್ಳಿಯ ಬಸಯ್ಯ ಕಾಡಯ್ಯ ಹಿರೇಮಠ, ಸಿದ್ಧಾಪುರದ ಬಸನಗೌಡ ಮಾಲಿ ಪಾಟೀಲ, ಬೆಂಗಳೂರಿನ ಬಾಳಯ್ಯ ಇಂಡಿಮಠ ಇವರಿಗೆ ರಂಭಾಪುರಿ ಜಗದ್ಗುರುಗಳು ಗುರುರಕ್ಷೆ ನೀಡಿ ಆಶೀರ್ವದಿಸಿದರು.

ಚಿಕ್ಕಮಗಳೂರಿನ ಡಾ॥ ಕೆ.ಆರ್.ಭೂಮಿಕಾ ಭರತ ನಾಟ್ಯ ಪ್ರದರ್ಶಿಸಿದರು. ಕೊಡ್ಲಿಪೇಟೆ ರಾಜೇಶ್ವರಿ ನಾಗರಾಜ್ ಸ್ವಾಗತಿಸಿದರು. ಚಿಕ್ಕಮಗಳೂರಿನ ಪಾರ್ವತಿ ಮಹಿಳಾ ಬಳಗದವರಿಂದ ಸಂಗೀತ ಜರುಗಿತು. ಸವಣೂರಿನ ಡಾ. ಗುರುಪಾದಯ್ಯ ಸಾಲಿಮಠ ನಿರೂಪಿಸಿದರು.

# ಹುಕ್ಕೇರಿ ಶ್ರೀಗಳ ಆಶೀರ್ವಾದ ಪಡೆದ ಕಾಂಗ್ರೆಸ್ ಅಭ್ಯರ್ಥಿ ಮೃಣಾಲ್ ಹೆಬ್ಬಾಳ್ಕರ್


**ಬೆಳಗಾವಿ :** ಕಾಂಗ್ರೆಸ್ ಲೋಕಸಭಾ ಮತಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮೃಣಾಲ್ ಹೆಬ್ಬಾಳ್ಕರ್ ಇಲ್ಲಿನ ಲಕ್ಷ್ಮೀ ಟೇಕಡಿಯಲ್ಲಿರುವ ಬೆಳಗಾವಿ ಹುಕ್ಕೇರಿ ಹಿರೇಮಠದ ಶಾಖೆಗೆ ಭೇಟಿ ನೀಡಿ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಅವರನ್ನು ಗೌರವಿಸಿ, ಆಶೀರ್ವಾದ ಪಡೆದರು.

ಈ ಸಂದರ್ಭದಲ್ಲಿ ಮಾತನಾಡಿದ ಮೃಣಾಲ್ ಹೆಬ್ಬಾಳ್ಕರ್, ಹುಕ್ಕೇರಿ ಹಿರೇಮಠದ ಶ್ರೀ ಚಂದ್ರಶೇಖರಶಿವಾಚಾರ್ಯಸ್ವಾಮೀಜಿಅವರಮಾರ್ಗದರ್ಶನದಲ್ಲಿನಾವುನಡೆಯುತ್ತಿದ್ದೇವೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವೆ, ನಮ್ಮ ತಾಯಿಯಾದ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಹಾಗೂ ವಿಧಾನಪರಿಷತ್ತಿನ ಸದಸ್ಯ ಚನ್ನರಾಜ ಹಟ್ಟಿಹೊಳಿ ಅವರು ಸಹ ಶ್ರೀಗಳ ಮಾರ್ಗದರ್ಶನದಂತೆ ರಾಜಕೀಯದಲ್ಲಿ ಜನಪರ ಕೆಲಸ ಮಾಡುತ್ತಿದ್ದಾರೆ. ಅದೇ ರೀತಿ ಶ್ರೀಗಳು ನನಗೂ ಮಾರ್ಗದರ್ಶನ ನೀಡಲಿ ಎಂದು ಪ್ರಾರ್ಥಿಸಿದ್ದೇನೆ ಎಂದು ಹೇಳಿದರು.

ಲೋಕಸಭಾ ಚುನಾವಣೆಗೆ ಆಯ್ಕೆ ಮಾಡಿದರೆ ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಹಾಗೂ ನಮ್ಮ ಭಾಗದ ಎಲ್ಲ ಶಾಸಕರ ಮಾರ್ಗದರ್ಶನದಲ್ಲಿ ಬೆಳಗಾವಿಯನ್ನು ಮಾದರಿ ಜಿಲ್ಲೆಯನ್ನಾಗಿ ಮಾಡುತ್ತೇನೆ ಎಂದರು. ಈ ಸಂದರ್ಭದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹಾಗೂ ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಇದ್ದರು.

# ಸ್ವೀಪ್ ಚಟುವಟಿಕೆಗಳ ಕುರಿತು ರಾಜ್ಯ ಚುನಾವಣಾ ಆಯೋಗದಿಂದ ವಿಡಿಯೋ ಸಂವಾದ

## ಶೇ.10 ಕ್ಕಿಂತ ಕಡಿಮೆ ಮತದಾನ ನಡೆದ ಮತಗಟ್ಟೆಗಳಲ್ಲಿ ಮತದಾನ ಹೆಚ್ಚಿಸಲು ಕ್ರಮ ವಹಿಸಿ: ರಾಜ್ಯ ಮುಖ್ಯ ಚುನಾವಣಾಧಿಕಾರಿ



**ಕೊಪ್ಪಳ :** ಜಿಲ್ಲೆಯ ಯಾವುದೇ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಶೇ.10 ಕ್ಕಿಂತ ಕಡಿಮೆ ಮತದಾನ ನಡೆದ ಮತಗಟ್ಟೆಗಳನ್ನು ಗುರುತಿಸಿ, ಅಂತಹ ಮತಗಟ್ಟೆಗಳಲ್ಲಿ ಮತದಾನ ಪ್ರಮಾಣ ಹೆಚ್ಚಿಸಲು ಅಗತ್ಯ ಕ್ರಮ ವಹಿಸಿ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್‌ಕುಮಾರ್ ಮೀನಾ ಅವರು ಹೇಳಿದರು.

ಗುರುವಾರದಂದು ರಾಜ್ಯದ ಎಲ್ಲ ಸ್ವೀಪ್ ಸಮಿತಿ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳೊಂದಿಗೆ ಸ್ವೀಪ್ ಚಟುವಟಿಕೆಗಳ ಕುರಿತು ಚರ್ಚಿಸಲು ಆಯೋಜಿಸಿದ್ದ ವಿಡಿಯೋ ಸಂವಾದವನ್ನು ಉದ್ದೇಶಿಸಿ ಅವರು ಮಾತನಾಡಿದರು.

ರಾಜ್ಯದ ಎಲ್ಲ ಮತಗಟ್ಟೆಗಳಲ್ಲಿ ಅವಶ್ಯಕ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ಶೌಚಾಲಯ, ನೆರಳಿನ ವ್ಯವಸ್ಥೆ, ವಿಕಲಚೇತನರಿಗೆ ರ್‍ಯಾಂಪ್ ವ್ಯವಸ್ಥೆಯನ್ನು ಕಡ್ಡಾಯವಾಗಿ ಕಲ್ಪಿಸಬೇಕು. ಉದ್ಯೋಗ, ಶಿಕ್ಷಣ ಮುಂತಾದ ಕಾರಣಗಳಿಗೆ ವಲಸೆ ಹೋದವರನ್ನು ಮತದಾನದಲ್ಲಿ ಪಾಲ್ಗೊಳ್ಳುವಂತೆ ಮನವೊಲಿಸಬೇಕು. ಶೇಕಡವಾರು ಮತದಾನದ ಪ್ರಮಾಣವನ್ನು ಹೆಚ್ಚಿಸಲು ಅವಶ್ಯವಿರುವ ಸ್ವೀಪ್ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು. ಹೊಸದಾಗಿ ಗುರುತಿಸಿದ ಮತಗಟ್ಟೆಗೆ ಭೇಟಿ ನೀಡಿ ಎಲ್ಲ ಸೌಕರ್ಯಗಳಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಈ ಸಂದರ್ಭ ಮಾತನಾಡಿದ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಸ್ವೀಪ್ ಸಮಿತಿಯ ಅಧ್ಯಕ್ಷರಾದ ರಾಹುಲ್ ರತ್ನಂ ಪಾಂಡೆಯ ಅವರು, ಜಿಲ್ಲೆಯ ಕುಷ್ಟಗಿ ತಾಲ್ಲೂಕಿನಲ್ಲಿ ಕಳೆದ ಲೋಕಸಭಾ ಚುನಾವಣೆಯಲ್ಲಿ ಶೇ.63 ರಷ್ಟು ಮತದಾನವಾಗಿತ್ತು. ಈ ಭಾಗ ಮಳೆಯಾಶ್ರಿತ ಪ್ರದೇಶವಾಗಿರುವುದರಿಂದ ಇಲ್ಲಿನ ಜನರು ಉದ್ಯೋಗ ಅರಸಿ ಮಂಗಳೂರು, ಉಡುಪಿ, ಮಹಾರಾಷ್ಟ್ರ ಕಡೆಗೆ ವಲಸೆ ಹೋಗುತ್ತಾರೆ. ಅಂತಹವರನ್ನು ಗುರುತಿಸಿ, ನರೇಗಾ ಉದ್ಯೋಗ ಖಾತ್ರಿ ಯೋಜನೆ ಬಗ್ಗೆ ಮಾಹಿತಿ ನೀಡಿ, ಅವರ ಮನವೊಲಿಸಿ ಕಳೆದ ಲೋಕಸಭಾ ಚುನಾವಣೆಯಲ್ಲಿ ಮತದಾನದ ಪ್ರಮಾಣವನ್ನು ಶೇ.71 ರಷ್ಟು ಹೆಚ್ಚಿಸಲಾಗಿತ್ತು. ಈ ಬಾರಿ ಬರ ಹಾಗೂ ಇತರೆ ಕಾರಣಗಳಿಗೆ ಕಳೆದ 2 ತಿಂಗಳುಗಳ ಹಿಂದೆಯೇ ತಾಲ್ಲೂಕಿನ ಬಹಳಷ್ಟು ಜನರು ಗುಳೆ ಹೋಗಿದ್ದು, ಅವರ ಮನವೊಲಿಸಿ ಮತದಾನದಲ್ಲಿ ಪಾಲ್ಗೊಳ್ಳುವಂತೆ ಕ್ರಮ ವಹಿಸಲಾಗುತ್ತಿದೆ. ನರೇಗಾ ಕಾರ್ಮಿಕರಿಂದ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಜಾಗೃತಿ ಜಾಥಾದಂತ ವಿನೂತನ ಕಾರ್ಯಕ್ರಮಗಳನ್ನು ಆಯೋಜಿಸುವುದರ ಮೂಲಕ ಹೆಚ್ಚಿನ ಪ್ರಮಾಣದಲ್ಲಿ ಮತದಾನ ಮಾಡುವ ಬಗ್ಗೆ, ಮತದಾನದ ಮಹತ್ವದ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ. ಉಳಿದಂತೆ ಜಿಲ್ಲೆಯ ಎಲ್ಲ ಮತಗಟ್ಟೆಗಳಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳು, ರ್‍ಯಾಂಪ್ ಹಾಗೂ ಶಾಮಿಯಾನ ವ್ಯವಸ್ಥೆ ಕಲ್ಪಿಸಲು ಯೋಜನೆ ಸಿದ್ದಪಡಿಸಲಾಗಿದೆ ಎಂದು ಮಾಹಿತಿ ನೀಡಿದರು.

ವಿಡಿಯೋ ಸಂವಾದದಲ್ಲಿ ಜಿ.ಪಂ. ಮುಖ್ಯ ಯೋಜನಾಧಿಕಾರಿ ಡಿ.ಮಂಜುನಾಥ, ಸಹಾಯಕ ಕಾರ್ಯದರ್ಶಿಗಳಾದ ಶಿವಪ್ಪ ಸುಬೇದಾರ, ನಗರಸಭೆ ಆಯುಕ್ತರಾದ ಗಣಪತಿ, ಡಿಐಇಸಿ ಸಂಯೋಜಕರಾದ ಶ್ರೀನಿವಾಸ ಚಿತ್ರಗಾರ, ಐಇಸಿ ಸಂಯೋಜಕರಾದ ಮಾರುತಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State